GOVERNMENT OF TAMIL NADU

ಎರಡನೇ ತರಗತಿ

(STANDARD TWO)

ಅವಧಿ – II

(TERM-II)

ಗಣಿತ

ಪರಿಸರ ವಿಜ್ಞಾನ

MATHEMATICS

ENVIRONMENTAL SCIENCE

KANNADA MEDIUM

Department of School Education

Untouchability is Inhuman and a Crime

Government of Tamil Nadu
First Edition - 2026
(Published under New Syllabus
in Trimester Pattern)

Price : Rs.

A call can change your life (24×7 toll free helplines for children below 18 years)

If you are forced into
Child Marriage or Child Labour,
If you are Emotionally,
Physically, Sexually
Harassed or Abused,

If you feel unsafe dial CHILDLINE 1098 Night & Day

Caller details will be kept confidential

If you are feeling Threatened or
being Abused or Harassed –
Emotionally, Physically or Sexually,
If you are feeling unsafe,
If you need guidance for
Examinations or Higher Education

Dial 14417

Caller details will be kept confidential

Content Creation

State Council of Educational
Research and Training
© SCERT 2026

Printing & Publishing

Tamil Nadu Textbook and
Educational Services Corporation

Foreword

The early years of childhood are a time of wonder-when curiosity is boundless, imagination is vivid, and every experience becomes a step in the journey of learning. These textbooks for Classes 1 to 3 have been developed to honour this spirit, creating a learning experience that is joyful, meaningful, and engaging.

Developed as part of the **Tamil Nadu State Education Policy-2025**, these books mark a significant step towards strengthening foundational education in the State. The vision and direction provided by the **Hon'ble Minister for School Education** have ensured that the policy's emphasis on child-centred, competency-based, and inclusive learning is meaningfully reflected in these materials.

The leadership of the **Additional Chief Secretary,** School Education has been instrumental in ensuring the integration of 21st-century skills and knowledge, and in shaping the textbooks into engaging story-driven learning experiences.

This is further reflected in a competency-based approach to curriculum and assessment that moves beyond rote learning to foster deep conceptual understanding and meaningful application. The integration of value education to build character, along with life skills, art and motor skill development, enables the holistic development of the child.

The members of the High-Level Curriculum Expert Committee, the Chairperson and the members of the Curriculum Development Committee, have provided constant guidance, shaping and refining these materials through their insights and expertise, alongside the contributions of educators and practitioners acknowledged elsewhere in this book.

At this foundational stage, learning must build strong foundations while supporting the overall development of the child. These textbooks bring together a carefully designed set of features that make learning active, engaging, and meaningful:

- Opportunities for speaking and listening, building confidence in expression
- Activities that strengthen logical thinking and conceptual understanding
- Integrated spaces for reading and writing practice within lessons
- Fine and gross motor skill development through drawing, colouring, tracing, and movement-based tasks
- Simple avenues for independent learning and self-reflection

The books also integrate values and life skills, helping children develop empathy, cooperation, responsibility and confidence.

Learning is guided by a competency-based approach that moves beyond memorisation towards understanding and application. Assessment is embedded within the learning process, making it continuous, meaningful and supportive.

These textbooks are learning companions that invite children to explore, think and express. They represent a shared commitment to enabling every child to learn with joy, grow with confidence, and build a strong foundation for the future-advancing a vision of **"Education reimagined, inclusive, equitable, and future-ready".**

DIRECTOR

State Council of Educational
Research and Training (SCERT)
Tamil Nadu

THE CONSTITUTION OF INDIA

PREAMBLE

WE, THE PEOPLE OF INDIA, having solemnly resolved to constitute India into a **SOVEREIGN SOCIALIST SECULAR DEMOCRATIC REPUBLIC** and to secure to all its citizens:

JUSTICE, social, economic and political;

LIBERTY of thought, expression, belief, faith and worship;

EQUALITY of status and of opportunity;

and to promote among them all

FRATERNITY assuring the dignity of the individual and the unity and integrity of the Nation;

IN OUR CONSTITUENT ASSEMBLY this twenty-sixth day of November, 1949, do **HEREBY ADOPT, ENACT AND GIVE TO OURSELVES THIS CONSTITUTION.**

ಮುನ್ನುಡಿ

ತಮಿಳುನಾಡು ರಾಜ್ಯ ಶಿಕ್ಷಣ ನೀತಿ (TNSEP) 2025 ಪ್ರಾಥಮಿಕ ಹಂತದ ಮಕ್ಕಳಿಗೆ ಕೌಶಲ್ಯ ಆಧಾರಿತ ಕಲಿಕೆಯನ್ನು ಪಡೆಯಲು ದೃಢೀಕರಿಸಲು ಕಲಿಕಾ ಮಾರ್ಗಆಧಾರಿತ ಮತ್ತು ಅನುಭವ ಆಧಾರಿತ ಕಲಿಕೆಗೆ ಒತ್ತು ನೀಡುವುದು.

ಗಣಿತ ಕೌಶಲ್ಯವನ್ನು ಸುಧಾರಿಸಲು ವಿಶಿಷ್ಟವಾದುದನ್ನು ಹೇಳಿ



ಕಲಿಯೋಣ

ಕಥೆಗಳು ಮತ್ತು ನಿಜ ಜೀವನದ ಸನ್ನಿವೇಶಗಳ ಮೂಲಕ ಪಾಠಗಳನ್ನು ದೈನಂದಿನ ಅನುಭವಗಳಿಗೆ ಸಂಪರ್ಕಿಸುವುದು.



ಮಾಡಿ ನೋಡೋಣ

ಪ್ರಾಯೋಗಿಕ ಅಭ್ಯಾಸಗಳನ್ನು ಮಕ್ಕಳೊಂದಿಗೆ ಸಮನ್ವಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು. ಮತ್ತು ಹೊಸ ಪರಿಕಲ್ಪನೆಗಳ ಪಾಂಡಿತ್ಯವನ್ನು ಪಡೆಯಲು ಸಹಾಯವಾಗುತ್ತದೆ.



ಅಭ್ಯಾಸ ಮಾಡೋಣ

ಆಟಗಳು ಮತ್ತು ಚಟುವಟಿಕೆಗಳ ಮೂಲಕ ಮೂಲಭೂತ ಗಣಿತ ಕೌಶಲ್ಯಗಳನ್ನು ಬಲಪಡಿಸುವುದು.



ಅನ್ವೇಷಣೆಯನ್ನು ಮಾಡೋಣ

ಸಾಂದರ್ಭಿಕ ಚಿಂತನೆಯನ್ನು ವ್ಯಕ್ತಪಡಿಸಲು ಸಹಾಯ ಮಾಡುವುದು.

ಎರಡನೇ ತರಗತಿ ಎರಡನೇ ಅವಧಿಯ ಪಠ್ಯಪುಸ್ತಕವು ಎರಡು ಘಟಕಗಳ ಪುನರಾವರ್ತನೆಯಾಗುವ ವಿಧಾನದೊಂದಿಗೆ ರಚನೆಯಾಗಿದೆ.



ಘಟಕ - 1

- 99 ರವರೆಗಿನ ಸಂಖ್ಯೆಗಳನ್ನು ನಿರ್ವಹಿಸುತ್ತದೆ.
- ಆಕಾರಗಳನ್ನು ರಚಿಸುತ್ತದೆ ಮತ್ತು ವರ್ಗೀಕರಿಸುತ್ತದೆ.



ಘಟಕ - 2

- 99 ಮೀರದ ಸಂಖ್ಯೆಗಳಿಗೆ ಸಂಖ್ಯಾ ಕಾರ್ಯಾಚರಣೆಗಳನ್ನು ನಿರ್ವಹಿಸುತ್ತದೆ.
- ಸರಳ ತಕ್ಕಡಿಯನ್ನು ಬಳಸಿಕೊಂಡು ವಸ್ತುಗಳ ತೂಕವನ್ನು ಹೋಲಿಸುತ್ತದೆ.

ಪಠ್ಯಪುಸ್ತಕದ ವಿಶಿಷ್ಟ ಲಕ್ಷಣಗಳು



ಸಮಗ್ರ ಕಲಿಕೆ

ಕಲೆ, ದೈಹಿಕ ಚಲನ ಕೌಶಲ್ಯಗಳು, ಜೀವನ ಕೌಶಲ್ಯಗಳು ಮತ್ತು ಮೌಲ್ಯಗಳನ್ನು ಸಂಯೋಜಿಸುತ್ತದೆ



ಶಿಕ್ಷಕರ ಟಿಪ್ಪಣಿ

ಪಠ್ಯಪುಸ್ತಕಗಳನ್ನು ಮೀರಿ ಚಟುವಟಿಕೆ ವಿವರಣೆಗಳು ಮತ್ತು ಹೆಚ್ಚುವರಿ ಒಳಹರಿವುಗಳೊಂದಿಗೆ ವೇದಿಕೆಯನ್ನು ಶಿಕ್ಷಕರು ಒದಗಿಸಿಕೊಡುತ್ತಾರೆ.



ಡಿಜಿಟಲ್ ಸಂಪನ್ಮೂಲಗಳು

ಮಕ್ಕಳಿಗೆ ಅನುಭವಿ, ಸ್ವ-ಗತಿಯ ಮತ್ತು ವಿವಿಧ ಕಲಿಕೆಯ ಶೈಲಿಗಳನ್ನು ಒದಗಿಸುತ್ತದೆ.

ಮೌಲ್ಯಮಾಪನ ಮತ್ತು ಪರಿಹಾರ ಬೋಧನೆ

ಪಠ್ಯ ಪುಸ್ತಕದಲ್ಲಿ ಒದಗಿಸಲಾದ ಅಭ್ಯಾಸಗಳು ಹಾಗೂ ಮುಕ್ತ ಪ್ರಶ್ನೆಗಳು ಮತ್ತು ಪರಿಶೋಧನೆಯ ಮೂಲಕ ತಾರ್ಕಿಕತೆ ವಿಶ್ಲೇಷಣಾತ್ಮಕ ಕೌಶಲ್ಯಗಳು, ಗಣಿತ ಪರಿಹಾರ ಕೌಶಲ್ಯಗಳು ಮತ್ತು 21ನೇ ಶತಮಾನದ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ.

ಕಲಿಕಾ ಪಯಣ



ಒಂದೊಂದು ಪಾಠದ ಕೊನೆಯಲ್ಲಿ ಕಲಿಕೆಯ ಸಾಧನೆಯ ಮಟ್ಟವನ್ನು ವೀಕ್ಷಣೆ ಮಾಡಲು ಪರಿಹಾರ ಬೋಧನೆಗಾಗಿ ಯೋಚಿಸಲು ಅನುಕೂಲ ಮಾಡಿಕೊಡುತ್ತದೆ.

ನನ್ನಿಂದ ಸಾಧ್ಯ



ಮೌಖಿಕ ಚಟುವಟಿಕೆಗಳು ಲಿಖಿತ ಚಟುವಟಿಕೆಗಳು ಮತ್ತು ಕಾರ್ಯ ಯೋಜನೆಗಳ ಮುಖಾಂತರ ಸಂಯೋಜಿಸಲಾದ ಕಲಿಕೆಗೆ ಪರಿಣಾಮಕಾರಿಯಾಗಿ ಮೌಲ್ಯಮಾಪನಕ್ಕೆ ಒಳಗೊಳ್ಳುವರು.

ಈಗಿನ ತಾಂತ್ರಿಕವಾಗಿ ಮುಂದುವರಿದ ಸನ್ನಿವೇಶಗಳಲ್ಲಿ ಮಕ್ಕಳು ವಿವಿಧ ವೇದಿಕೆಗಳು ಮತ್ತು ಸಾಮಾಜಿಕ ಸಂವಹನಗಳ ಮೂಲಕ ಅನೇಕ ಅನುಭವಗಳನ್ನು ಪಡೆಯುತ್ತಾರೆ. ಇದಲ್ಲದೆ ಪಠ್ಯಪುಸ್ತಕಗಳು ಮಕ್ಕಳ ಗಣಿತ ಕೌಶಲ್ಯಗಳನ್ನು ಸುಧಾರಿಸಲು ಒಂದು ಸಂಪನ್ಮೂಲವಾಗಿದೆ. ಆದ್ದರಿಂದ ಮಕ್ಕಳ ಗಣಿತದ ಯೋಜನೆಯನ್ನು ಸುಧಾರಿಸಲು ವಿಷಯವನ್ನು ಬಲಪಡಿಸಲು ಮತ್ತು ಜೀವನದ ಸಂದರ್ಭಗಳಲ್ಲಿ ವಿಷಯವನ್ನು ಪರಿಣಾಮಕಾರಿಯಾಗಿ ಅನ್ವಯಿಸಲು ಶಿಕ್ಷಕರು ವಿವಿಧ ರೀತಿಯ ಮೌಲ್ಯಮಾಪನ ಸಾಧನಗಳು, ಹೆಚ್ಚುವರಿ ಚಟುವಟಿಕೆಗಳು ಮತ್ತು ವಿವಿಧ ಕಲಿಕಾ ಸಂಪನ್ಮೂಲಗಳನ್ನು ಬಳಸಬೇಕೆಂದು ವಿನಂತಿಸಲಾಗಿದೆ.

ಗಣಿತ

ಅವಧಿ – II

ಪರಿವಿಡಿ

ಘಟಕ – 1

ಪಾಠಗಳು

1. ಹೊಳೆಯುವ ಬೆಣಚುಕಲ್ಲುಗಳು 1

2. ನೆರಳು ನೋಡು! ಹೆಸರು ಹೇಳು! 17

3. ಒಟ್ಟು ಬಣ್ಣದ ಪೆನ್ಸಿಲ್‌ಗಳು 28



ಘಟಕ – 2

ಪಾಠಗಳು



4. ನಾವು ಹೇಗೆ ವೇಗವಾಗಿ ಎಣಿಸಬಹುದು? 39

5. ಮೇಲೆ... ಮೇಲೆ... ಕೆಳಗೆ... ಕೆಳಗೆ... 49

6. ಉಳಿದ ಬಣ್ಣದ ಪೆನ್ಸಿಲ್‌ಗಳು 54

YM3UU e-book

BG2GZ Inclusive book

WJ7QM THB

TI4ZC Assessment

ಘಟಕ I

1. ಹೊಳೆಯುವ ಬೆಣಚುಕಲ್ಲುಗಳು

ZN7MY

ಕಲಿಯೋಣ

ಚಾರುಮತಿ, ದೀಪಕ್ ಮತ್ತು ನರೇನ್ ತಮ್ಮ ತಾಯಂದಿರೊಂದಿಗೆ ನದಿಯ ದಡಕ್ಕೆ ಹೋದರು.





ಮೂವರೂ ತಮಗೆ ಇಷ್ಟವಾದ ಕಲ್ಲುಗಳನ್ನು ಸಂಗ್ರಹಿಸಿ ಎಣಿಸಲು ಪ್ರಾರಂಭಿಸಿದರು.









ಅವರು ಮೂವರೂ ತಾವು ಸಂಗ್ರಹಿಸಿದ ಕಲ್ಲುಗಳೊಂದಿಗೆ ಸಂತೋಷದಿಂದ ಆಟವಾಡಿದರು.

ಶಿಕ್ಷಕರ ಟಿಪ್ಪಣಿ

ಚಿತ್ರ ಕಥೆಯನ್ನು ನಿರೂಪಿಸಿ ಮತ್ತು ನಿರ್ದಿಷ್ಟ ಸಂಖ್ಯೆಗಿಂತ '10 ಹೆಚ್ಚು', '10 ಕಡಿಮೆ', '1 ಹೆಚ್ಚು' ಮತ್ತು '1 ಕಡಿಮೆ' ಎಂಬ ಪರಿಕಲ್ಪನೆಗಳನ್ನು ಬಲಪಡಿಸಿ.

ಮಾಡಿ ನೋಡೋಣ





ಮೂರು ಜನರ ಗುಂಪುಗಳಲ್ಲಿ ಆಟವಾಡಿ. ಮೊದಲ ಗುಂಪು 1 ರಿಂದ 99 ರವರೆಗಿನ ಸಂಖ್ಯೆಯ ರಟ್ಟುಗಳನ್ನು ಹೊಂದಿರುವ ಗಾಜಿನ ಜಾಡಿಯಿಂದ ಒಂದು ರಟ್ಟನ್ನು ಆರಿಸಬೇಕು. ಎರಡನೇ ಮತ್ತು ಮೂರನೇ ಗುಂಪುಗಳು ಕ್ರಮವಾಗಿ ₹10 ನಾಣ್ಯ ಮತ್ತು ₹1 ನಾಣ್ಯವನ್ನು ಚಿಮ್ಮಿಸುತ್ತಾರೆ, ನಾಣ್ಯವು ತಲೆ ಮೇಲೆ ಬಿದ್ದರೆ, ಅವರು ಸಂಖ್ಯಾ ರಟ್ಟಿನಲ್ಲಿರುವ ಸಂಖ್ಯೆಗಿಂತ 10 ಹೆಚ್ಚು ಇರುವ ಸಂಖ್ಯೆಯನ್ನು ಹೇಳುತ್ತಾರೆ; ಅದು ಬಾಲ ಮೇಲೆ ಬಿದ್ದರೆ, ಅವರು 10 ಅಧಿಕ ಇರುವ ಸಂಖ್ಯೆಯನ್ನು ಹೇಳುತ್ತಾರೆ. ಸರಿಯಾದ ಉತ್ತರಗಳನ್ನು ನೀಡಿದ ನಂತರ, ಎಲ್ಲರೂ ಹೆಬ್ಬೆರಳುಗಳನ್ನು ಮೇಲಕ್ಕೆತ್ತಿ ಒಟ್ಟಿಗೆ ಸಂಖ್ಯೆಯನ್ನು ಗಟ್ಟಿಯಾಗಿ ಹೇಳುತ್ತಾರೆ.

ಅಭ್ಯಾಸ ಮಾಡೋಣ

ಕಲ್ಲಿನ ಮೇಲಿರುವ ಸಂಖ್ಯೆಗಳನ್ನು ಗಮನಿಸಿ ಹೊಂದಿಸಿ.

1	2	3	4	5	6	7	8	9	10
11	12	13	14	15	16	17	18	19	20
21	22	23	24	25	26	27	28	29	30
31	32	33	34	35	36	37	38	39	40
41	42	43	44	45	46	47	48	49	50
51	52	53	54	55	56	57	58	59	60
61	62	63	64	65	66	67	68	69	70
71	72	73	74	75	76	77	78	79	80
81	82	83	84	85	86	87	88	89	90
91	92	93	94	95	96	97	98	99	



ಕೊಟ್ಟಿರುವ ಸಂಖ್ಯೆಯ ಎಡಭಾಗದಲ್ಲಿರುವ ಸಂಖ್ಯೆ.	10 ಅಧಿಕ
ಕೊಟ್ಟಿರುವ ಸಂಖ್ಯೆಯ ಬಲಭಾಗದಲ್ಲಿರುವ ಸಂಖ್ಯೆ	1 ಕಡಿಮೆ
ನೀಡಿರುವ ಸಂಖ್ಯೆಗಿಂತ ಮೇಲಿನ ಸಂಖ್ಯೆ	1 ಅಧಿಕ
ನೀಡಿರುವ ಸಂಖ್ಯೆಯ ಕೆಳಗಿನ ಸಂಖ್ಯೆ	10 ಕಡಿಮೆ

ಅನ್ವೇಷಿಸಿ ತಿಳಿಯೋಣ

ಕಾಣೆಯಾದ ಸಂಖ್ಯೆಗಳನ್ನು ಬರೆಯಿರಿ.



























ಮಾಡಿ ನೋಡೋಣ

35 ಕ್ಕೆ 22 ಅಧಿಕವಾದರೆ, ಎಂದರೇನು?



35 ಕ್ಕೆ 10 ಅಧಿಕವಾದರೆ 45 ಆಗುತ್ತದೆ.
45 ಕ್ಕೆ 10 ಅಧಿಕವಾದರೆ 55 ಆಗುತ್ತದೆ.
55 ಕ್ಕೆ 2 ಅಧಿಕವಾದರೆ 57 ಆಗುತ್ತದೆ.
ಆದ್ದರಿಂದ, 35 ಕ್ಕೆ 22 ಅಧಿಕವಾದರೆ 57 ಆಗುತ್ತದೆ.

35 ಕ್ಕೆ 2 ಅಧಿಕವಾದರೆ 37 ಆಗುತ್ತದೆ.
37 ಕ್ಕೆ 10 ಅಧಿಕವಾದರೆ 47 ಆಗುತ್ತದೆ.
47 ಕ್ಕೆ 10 ಅಧಿಕವಾದರೆ 57 ಆಗುತ್ತದೆ.
ಹಾಗಾಗಿ, 35 ಕ್ಕೆ 22 ಅಧಿಕವಾದರೆ 57 ಆಗುತ್ತದೆ.





ಮಕ್ಕಳನ್ನು ಎರಡು ಗುಂಪುಗಳಾಗಿ ಜೋಡಿಸಿ. ಪ್ರತಿ ಮಗುವಿಗೆ ಒಂದು ಸಂಖ್ಯಾ ರಟ್ಟುಗಳನ್ನು ಆಯ್ಕೆ ಮಾಡಲು ಹೇಳಿ. ಮೇಲೆ ತೋರಿಸಿರುವ ಎರಡು ವಿಧಾನಗಳನ್ನು ಬಳಸಿಕೊಂಡು ಒಂದು ಸಂಖ್ಯೆ ಇನ್ನೊಂದು ಸಂಖ್ಯೆಗಿಂತ ಎಷ್ಟು ಅಧಿಕವಾಗಿದೆ ಎಂಬುದನ್ನು ಕಂಡುಹಿಡಿಯಲು ಹೇಳಿ.



ಅಭ್ಯಾಸ ಮಾಡೋಣ

ಸೂಚನೆಗಳ ಪ್ರಕಾರ ಪೆಟ್ಟಿಗೆಗಳನ್ನು ಭರ್ತಿ ಮಾಡಿ.

25 ಕ್ಕೆ 20 ಅಧಿಕವಾದರೆ	64 ಕ್ಕೆ 22 ಅಧಿಕವಾದರೆ	87 ಕ್ಕೆ 12 ಅಧಿಕವಾದರೆ
		

ಖಾಲಿ ಜಾಗವನ್ನು ಭರ್ತಿ ಮಾಡಿ.

- 44 ಕ್ಕಿಂತ 15 ಅಧಿಕವಾದಾಗ 59 ಆಗಿದೆ.
- 71 ಕ್ಕಿಂತ 24 ಅಧಿಕವಾದಾಗ _____.
- 31 ರೊಂದಿಗೆ 16 ಅನ್ನು ಸೇರಿಸಿದಾಗ ನಮಗೆ ಸಿಗುತ್ತದೆ ____.
- 65 ರೊಂದಿಗೆ 15 ಅನ್ನು ಸೇರಿಸಿದಾಗ ನಮಗೆ ಸಿಗುತ್ತದೆ ____.
- 54 ರೊಂದಿಗೆ ____ ಕೂಡಿದಾಗ ನಮಗೆ 85 ಸಿಗುತ್ತದೆ.
- 33 ಅನ್ನು ____ ಜೊತೆ ಸೇರಿಸಿದಾಗ, ನಮಗೆ 55 ಸಿಗುತ್ತದೆ.
- 14 ರೊಂದಿಗೆ ____ ಕೂಡಿದಾಗ ನಮಗೆ 39 ಸಿಗುತ್ತದೆ.
- 40 ರೊಂದಿಗೆ ____ ಕೂಡಿದಾಗ ನಮಗೆ 82 ಸಿಗುತ್ತದೆ.

ಮಾಡಿ ನೋಡೋಣ

48 ಕ್ಕೆ 36 ಕಡಿಮೆ ಆದಾಗ, ಎಂದರೇನು?



48 ಕ್ಕಿಂತ 10 ಕಡಿಮೆ ಆದಾಗ 38 ಆಗುತ್ತದೆ.
38 ಕ್ಕಿಂತ 10 ಕಡಿಮೆ ಆದಾಗ 28 ಆಗುತ್ತದೆ.
28 ಕ್ಕಿಂತ 10 ಕಡಿಮೆ ಆದಾಗ 18 ಆಗುತ್ತದೆ.
18 ಕ್ಕಿಂತ 6 ಕಡಿಮೆ ಆದಾಗ 12 ಆಗುತ್ತದೆ.
ಆದ್ದರಿಂದ, 48 ಕ್ಕಿಂತ 36 ಕಡಿಮೆ ಆದಾಗ 12 ಆಗುತ್ತದೆ.

48 ಕ್ಕಿಂತ 6 ಕಡಿಮೆ ಆದಾಗ 42 ಆಗುತ್ತದೆ.
42 ಕ್ಕಿಂತ 10 ಕಡಿಮೆ ಆದಾಗ 32 ಆಗುತ್ತದೆ.
32 ಕ್ಕಿಂತ 10 ಕಡಿಮೆ ಆದಾಗ 22 ಆಗುತ್ತದೆ.
22 ಕ್ಕಿಂತ 10 ಕಡಿಮೆ ಆದಾಗ 12 ಆಗುತ್ತದೆ.
ಆದ್ದರಿಂದ, 48 ಕ್ಕಿಂತ 36 ಕಡಿಮೆ ಆದಾಗ 12 ಆಗುತ್ತದೆ.





ಮಕ್ಕಳನ್ನು ಎರಡು ಗುಂಪುಗಳಾಗಿ ಜೋಡಿಸಿ. ಪ್ರತಿ ಮಗುವಿಗೆ ಒಂದು ಸಂಖ್ಯೆ ಆಯ್ಕೆ ಮಾಡಲು ಹೇಳಿ. ಮೇಲೆ ತೋರಿಸಿರುವ ಎರಡು ವಿಧಾನಗಳಲ್ಲಿ ಒಂದು ಸಂಖ್ಯೆ ಇನ್ನೊಂದು ಸಂಖ್ಯೆಗಿಂತ ಎಷ್ಟು ಕಡಿಮೆ ಎಂದು ಕಂಡುಹಿಡಿಯಲು ಅವರಿಗೆ ತಿಳಿಸಿ.

ಅಭ್ಯಾಸ ಮಾಡೋಣ

ಸೂಚನೆಗಳ ಪ್ರಕಾರ ಪೆಟ್ಟಿಗೆಗಳನ್ನು ಭರ್ತಿ ಮಾಡಿ.

38 ಕ್ಕಿಂತ 20 ಕಡಿಮೆ	56 ಕ್ಕಿಂತ 22 ಕಡಿಮೆ	79 ಕ್ಕಿಂತ 12 ಕಡಿಮೆ
38	56	79

ಖಾಲಿ ಜಾಗವನ್ನು ಭರ್ತಿ ಮಾಡಿ.

- 54 ಕ್ಕಿಂತ 31 ಕಡಿಮೆ ಆದಾಗ 23 ಆಗುತ್ತದೆ.
- 75 ಕ್ಕಿಂತ 23 ಕಡಿಮೆ_____.
- 26 ರಿಂದ 11 ಅನ್ನು ಕಳೆದಾಗ, ನಮಗೆ ಸಿಗುತ್ತದೆ _____.
- 95 ರಿಂದ 24 ಅನ್ನು ಕಳೆದಾಗ, ನಮಗೆ ಸಿಗುತ್ತದೆ _____.
- 86 ರಿಂದ ಕಳೆದರೆ 70 _____ ಸಿಗುತ್ತದೆ.
- 38 ರಿಂದ _____ ಕಳೆದರೆ, ನಮಗೆ 12 ಸಿಗುತ್ತದೆ.
- _____ ರಿಂದ, 17 ಅನ್ನು ಕಳೆದರೆ ನಮಗೆ 31 ಸಿಗುತ್ತದೆ.
- _____ ರಿಂದ 45 ಅನ್ನು ಕಳೆದರೆ ನಮಗೆ 20 ಸಿಗುತ್ತದೆ.

ಮಾಡಿ ನೋಡೋಣ





ಶಿಕ್ಷಕರ ಟಿಪ್ಪಣಿ

21 ರಿಂದ 99 ರವರೆಗಿನ ಗುಂಪು ಸಂಖ್ಯಾ ಚೀಟಿಗಳನ್ನು ಒಬ್ಬರಿಗೆ ನೀಡಿ. 'ಇಪ್ಪತ್ತು, ಮೂವತ್ತು.... ತೊಂಬತ್ತು' ಮತ್ತು 'ಒಂದು, ಎರಡು,... ಒಂಬತ್ತು' ಎಂದು ಬರೆದಿರುವ ಮತ್ತೊಂದು ಗುಂಪು ಸಂಖ್ಯೆ ಹೆಸರಿನ ಚೀಟಿಗಳನ್ನು ನೀಡಿ. ಮೊದಲ ಗುಂಪಿಗೆ 21 ಮತ್ತು 99 ರ ನಡುವಿನ ಸಂಖ್ಯೆಯ ರಟ್ಟುಗಳನ್ನು ತೋರಿಸಲು ಹೇಳಿ (ಉದಾ: 47). ನಂತರ ಎರಡನೇ ಗುಂಪಿಗೆ ಸರಿಯಾದ ಸಂಖ್ಯಾ ಹೆಸರಿನ ರಟ್ಟುಗಳನ್ನು ಆಯ್ಕೆ ಮಾಡಲು ಮತ್ತು ರೂಪಿಸಲು ಹೇಳಿ (ಉದಾ: ನಲವತ್ತೇಳು).

ಅಭ್ಯಾಸ ಮಾಡೋಣ

ಕಡ್ಡಿಗಳ ಸಂಖ್ಯೆ ಮತ್ತು ಸಂಖ್ಯೆಯ ಹೆಸರನ್ನು ಓದಿ, ಬರೆಯಿರಿ ಮತ್ತು ಅಭ್ಯಾಸ ಮಾಡಿ.

ಕಡ್ಡಿಗಳು	ಸಂಖ್ಯೆ	ಸಂಖ್ಯೆಯ ಹೆಸರು	ಸಂಖ್ಯೆ	ಸಂಖ್ಯೆಯ ಹೆಸರು
	10	ಹತ್ತು		
	20	ಇಪ್ಪತ್ತು		
	30	ಮೂವತ್ತು		
	40	ನಲವತ್ತು		
	50	ಐವತ್ತು		
	60	ಅರವತ್ತು		
	70	ಎಪ್ಪತ್ತು		
	80	ಎಂಬತ್ತು		
	90	ತೊಂಬತ್ತು		



ಅಭ್ಯಾಸ ಮಾಡೋಣ

ಸಂಖ್ಯೆಯ ಹೆಸರುಗಳನ್ನು ಬರೆಯಿರಿ.



21 ಇಪ್ಪತ್ತೊಂದು

22 .....

23 .....

24 .....

25 .....

26 .....

27 .....

28 .....

29 .....



99 ರವರೆಗಿನ ಸಂಖ್ಯೆಗಳಿಗೆ ಸಂಖ್ಯಾ ಹೆಸರುಗಳ ರಟ್ಟುಗಳನ್ನು ಸಂಯೋಜಿಸುವ ಮೂಲಕ ಸಂಖ್ಯಾ ಹೆಸರುಗಳನ್ನು ಬರೆಯುವುದನ್ನು ಅಭ್ಯಾಸ ಮಾಡಿ.

ಈ ಕೆಳಗಿನ ಸಂಖ್ಯೆಗಳಿಗೆ ಸಂಖ್ಯಾ ಹೆಸರುಗಳನ್ನು ಬರೆಯಿರಿ.

35	ಮೂವತ್ತೈದು	72	
46		79	
53		84	
58		86	
67		99	



ಅನ್ವೇಷಿಸಿ ತಿಳಿಯೋಣ

ಯಾವುದೇ ಎರಡು ಅಕ್ಷರಗಳನ್ನು ಮೊದಲ ಅಕ್ಷರಗಳಾಗಿ ಬಳಸಿ, ಸಂಖ್ಯಾ ಹೆಸರುಗಳನ್ನು ಬರೆಯಿರಿ.



ಇಪ್ಪತ್ತಾರು .....

.....

.....

.....

.....

ಕಲಿಯೋಣ

ಒಂದು ಕಪ್ಪೆ 0 ಯಿಂದ ಮೂರು ಮೂರರಂತೆ 7 ಬಾರಿ ಮುಂದಕ್ಕೆ ನೆಗದರೆ, ಅದು ಯಾವ ಸಂಖ್ಯೆಯಲ್ಲಿ ನಿಲ್ಲುತ್ತದೆ?



ಸಮಾನ ಅಂತರಗಳಲ್ಲಿ ಸಂಖ್ಯೆಗಳನ್ನು ಪ್ರತಿನಿಧಿಸಲು ಸಂಖ್ಯಾ ರೇಖೆಯನ್ನು ಬಳಸಲಾಗುತ್ತದೆ. ಸಂಖ್ಯಾ ಸಾಲಿನಲ್ಲಿ ಬಲಕ್ಕೆ ಚಲಿಸಿದಾಗ, ಸಂಖ್ಯೆಗಳ ಮೌಲ್ಯವು ಹೆಚ್ಚಾಗುತ್ತದೆ ಮತ್ತು ಸಂಖ್ಯಾ ಸಾಲಿನಲ್ಲಿ ಎಡಕ್ಕೆ ಚಲಿಸಿದಾಗ ಸಂಖ್ಯೆಗಳ ಮೌಲ್ಯವು ಕಡಿಮೆಯಾಗುತ್ತದೆ.

ಅಭ್ಯಾಸ ಮಾಡೋಣ

ಸಂಖ್ಯಾ ರೇಖೆಯನ್ನು ಗಮನಿಸಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿ.



ಸಂಖ್ಯೆಯ ಮೇಲೆ ನಿಂತಿದೆ .....

ಸಂಖ್ಯೆಯ ಮೇಲೆ ನಿಂತಿದೆ .....

ಸಂಖ್ಯೆಯ ಮೇಲೆ ನಿಂತಿದೆ .....

ಸಂಖ್ಯೆಯ ಮೇಲೆ ನಿಂತಿದೆ .....

ಕೊಟ್ಟಿರುವ ಸಂಖ್ಯೆಗಳನ್ನು ಸಂಖ್ಯಾರೇಖೆಯ ಮೇಲೆ ಗುರುತಿಸಿ.

28, 35, 44, 17, 9



ಸಂಖ್ಯಾರೇಖೆಯ ಮೇಲೆ ಗುರುತಿಸಲಾದ ಸಂಖ್ಯೆಗಳನ್ನು ಬರೆಯಿರಿ.



ಅಭ್ಯಾಸ ಮಾಡೋಣ

ಹಕ್ಕಿ ತನ್ನ ಗೂಡನ್ನು ತಲುಪಲು ಮುಂದೆ ಹಾದುಹೋಗಬೇಕಾದ ಸಂಖ್ಯೆಗಳನ್ನು ಬರೆಯಿರಿ.



ಕೋಳಿ ತನ್ನ ಮರಿಯನ್ನು ತಲುಪಲು ಹಾದು ಹೋಗಬೇಕಾದ ಸಂಖ್ಯೆಗಳನ್ನು ಹಿಂದಕ್ಕೆ ಬರೆಯಿರಿ.



ನೀಡಿರುವ ಸುಳಿವುಗಳ ಪ್ರಕಾರ ಉತ್ತರಗಳನ್ನು ಸಂಖ್ಯಾರೇಖೆಯ ಮೇಲೆ ಗುರುತಿಸಿ ಬರೆಯಿರಿ.

i) 9 ರ ನಂತರ ಬರುವ ಸಂಖ್ಯೆ.

ii) 26 ರ ಮೊದಲು ಬರುವ ಸಂಖ್ಯೆ

iii) 39 ಮತ್ತು 41 ರ ನಡುವೆ ಬರುವ ಸಂಖ್ಯೆ

iv) 55 ರ ಮೊದಲು ಬರುವ ಸಂಖ್ಯೆ

v) 98 ರ ನಂತರ ಬರುವ ಸಂಖ್ಯೆ.

vi) 74 ಮತ್ತು 76 ರ ನಡುವೆ ಬರುವ ಸಂಖ್ಯೆ



ಮಾಡಿ ನೋಡೋಣ



0 ರಿಂದ 20 ರವರೆಗಿನ ಸಂಖ್ಯೆಯ ಚೀಟಿಗಳನ್ನು ನೆಲದ ಮೇಲೆ ಒಂದು ಸಾಲಿನಲ್ಲಿ ಇರಿಸಿ. ಒಂದು ಮಗುವಿಗೆ ಸಮಾನ ಹಂತಗಳಲ್ಲಿ ಜಿಗಿಯುವ ಮೂಲಕ (ಉದಾ: 3 ಸೆಕೆಂಡುಗಳಲ್ಲಿ) ನಿರ್ದಿಷ್ಟ ಸಂಖ್ಯೆಯ ಬೀಜಗಳನ್ನು ಸಂಖ್ಯಾ ಸಾಲಿನಲ್ಲಿ ಇರಿಸಲು ಹೇಳಿ. ಬೀಜಗಳನ್ನು ಎಲ್ಲಿ ಇರಿಸಲಾಗಿದೆ ಎಂಬುದನ್ನು ಹೇಳಲು ಮತ್ತೊಂದು ಮಗುವಿಗೆ ಹೇಳಿ. ಜಿಗಿಯುವ ಎಣಿಕೆಯನ್ನು ಬಲಪಡಿಸಲು ಮುಂದಕ್ಕೆ ಮತ್ತು ಹಿಂದಕ್ಕೆ ಜಿಗಿತಗಳ ಗಾತ್ರವನ್ನು ಬದಲಾಯಿಸುವ ಚಟುವಟಿಕೆಯನ್ನು ಪುನರಾವರ್ತಿಸಿ.

ಶಿಕ್ಷಕರ ಟಿಪ್ಪಣಿ

ಅಭ್ಯಾಸ ಮಾಡೋಣ

ಸಂಖ್ಯಾರೇಖೆಯ ಮೇಲೆ ಮುಂದಕ್ಕೆ ಜಿಗಿದು ಪೆಟ್ಟಿಗೆಗಳನ್ನು ಪೂರ್ಣಗೊಳಿಸಿ.



0	2	4	6							



0	3	6								



0	4	8								



0	5	10						

ಅಭ್ಯಾಸ ಮಾಡೋಣ

ಸಂಖ್ಯಾರೇಖೆಯಲ್ಲಿ ಹಿಂದಕ್ಕೆ ಜಿಗಿದು ಪೆಟ್ಟಿಗೆಗಳನ್ನು ಪೂರ್ಣಗೊಳಿಸಿ.



20	18	16	14							



30	27	24								



40	36	32								



40	35	30						

ಅನ್ವೇಷಿಸಿ ತಿಳಿಯೋಣ

ಸಂಖ್ಯಾರೇಖೆಯ ಮೇಲೆ ಕಪ್ಪೆಯ ಜಿಗಿತಗಳನ್ನು ಗಮನಿಸಿ ಮತ್ತು ಅದು 2 ಸೆಕೆಂಡುಗಳಲ್ಲಿ ಮುಂದಕ್ಕೆ ಜಿಗಿಯುತ್ತಿದೆಯೇ ಅಥವಾ ಇಲ್ಲವೇ ಎಂಬುದನ್ನು ಕಂಡುಹಿಡಿಯಿರಿ.



☐ ಹೌದು ☐ ಇಲ್ಲ

ಸಂಖ್ಯಾರೇಖೆಯ ಮೇಲೆ ಕಪ್ಪೆಯ ಜಿಗಿತಗಳನ್ನು ಗಮನಿಸಿ ಮತ್ತು ಅದು 4 ಸೆಕೆಂಡುಗಳಲ್ಲಿ ಹಿಂದಕ್ಕೆ ಜಿಗಿಯುತ್ತಿದೆಯೇ ಅಥವಾ ಇಲ್ಲವೇ ಎಂಬುದನ್ನು ಕಂಡುಹಿಡಿಯಿರಿ.



☐ ಹೌದು ☐ ಇಲ್ಲ

ಕಲಿಯೋಣ

ಮಾಲಾ, ರಾಧಾ ಮತ್ತು ಅಮಲಾ ತಮ್ಮ ತೋಟದಿಂದ ಹೂವುಗಳನ್ನು ಕಿತ್ತುಕೊಂಡರು. ಯಾರ ಬಳಿ ಕಡಿಮೆ ಹೂವುಗಳಿವೆ ಮತ್ತು ಯಾರ ಬಳಿ ಹೆಚ್ಚು ಹೂವುಗಳಿವೆ ಎಂದು ನೀವು ಹೇಳಬಲ್ಲಿರಾ?



ಶಿಕ್ಷಕರ ಟಿಪ್ಪಣಿ

ಮಕ್ಕಳಿಗೆ ಮೂರು ವಸ್ತುಗಳನ್ನು ಬೇರೆ ಬೇರೆ ಎಣಿಕೆಗಳಲ್ಲಿ ತೋರಿಸಿ. ಅವರು ಎಣಿಕೆಯಲ್ಲಿ 'ದೊಡ್ಡದು' ಮತ್ತು 'ಚಿಕ್ಕದು' ಪರಿಕಲ್ಪನೆಗಳನ್ನು ನೆನಪಿಸಿಕೊಳ್ಳುವಂತೆ ಮತ್ತು ಬಲಪಡಿಸುವಂತೆ ಮಾಡಿ.

ಮಾಡಿ ನೋಡೋಣ





ಶಿಕ್ಷಕರ ಟಿಪ್ಪಣಿ

ಒಂದು ದೊಡ್ಡ ವೃತ್ತವನ್ನು ಬಿಡಿಸಿ ಅದರೊಳಗೆ 1 ರಿಂದ 99 ರವರೆಗಿನ ಸಂಖ್ಯಾ ಚೀಟಿಗಳನ್ನು ಇರಿಸಿ. ಮೂರು ಮಕ್ಕಳನ್ನು ಸಂಖ್ಯಾ ಚೀಟಿಗಳನ್ನು ಮೇಲೆ ಟೆನ್ನಿಕಾಯ್ಟ್ ಎಸೆಯಲು ಹೇಳಿ. ಟೆನ್ನಿಕಾಯ್ಟ್ ಬಿದ್ದ ಸಂಖ್ಯೆಯ ಹತ್ತು ಮತ್ತು ಒಂದು ಸಂಖ್ಯೆಯನ್ನು ಹೋಲಿಸಲು ಹೇಳಿ ಮತ್ತು ದೊಡ್ಡ ಸಂಖ್ಯೆ ಮತ್ತು ಚಿಕ್ಕ ಸಂಖ್ಯೆಯನ್ನು ಗುರುತಿಸಿ.

ಅಭ್ಯಾಸ ಮಾಡೋಣ

ದೊಡ್ಡ ಸಂಖ್ಯೆಗೆ ಪೆಟ್ಟಿಗೆ ಹಾಕಿ.

32 **45** 19	95 64 17	50 12 33
71 70 78	45 43 49	83 88 81

ಚಿಕ್ಕ ಸಂಖ್ಯೆಗೆ ವೃತ್ತ ಹಾಕಿ.

30 74 41	27 17 97	62 43 20
98 91 95	34 37 35	62 68 65

ಕಲಿಯೋಣ



ಶಿಕ್ಷಕರ ಟಿಪ್ಪಣಿ

ಚಿಕ್ಕ ಸಂಖ್ಯೆಯಿಂದ ದೊಡ್ಡ ಸಂಖ್ಯೆಯನ್ನು ಜೋಡಿಸುವ ಕ್ರಮಕ್ಕೆ 'ಆರೋಹಣ ಕ್ರಮ' ಎಂದು , ದೊಡ್ಡ ಸಂಖ್ಯೆಯಿಂದ ಚಿಕ್ಕ ಸಂಖ್ಯೆಯನ್ನು ಜೋಡಿಸುವ ಕ್ರಮಕ್ಕೆ 'ಅವರೋಹಣ ಕ್ರಮ' ಎಂದು ಪರಿಚಯಿಸಿರಿ.





ಶಿಕ್ಷಕರ ಟಿಪ್ಪಣಿ

ನಾಲ್ಕು ಮಕ್ಕಳನ್ನು ಕರೆದು ವೃತ್ತದಲ್ಲಿ ತಲೆಕೆಳಗಾಗಿ ಇರಿಸಲಾಗಿರುವ ಯಾವುದೇ ನಾಲ್ಕು ಸಂಖ್ಯಾ ಚೀಟಿಗಳನ್ನು ಆಯ್ಕೆ ಮಾಡಲು ಹೇಳಿ. ಮೊದಲು, ಹತ್ತರ ಸ್ಥಾನದಲ್ಲಿರುವ ಸಂಖ್ಯೆಗಳನ್ನು ಹೋಲಿಕೆ ಮಾಡಿ ದೊಡ್ಡ ಸಂಖ್ಯೆಯನ್ನು ಗುರುತಿಸಿ. ಹತ್ತರ ಸ್ಥಾನದಲ್ಲಿರುವ ಸಂಖ್ಯೆಗಳು ಒಂದೇ ಆಗಿದ್ದರೆ, ಒಂದು ಸ್ಥಾನದಲ್ಲಿರುವ ಸಂಖ್ಯೆಗಳನ್ನು ಹೋಲಿಕೆ ಮಾಡಿ. ನಂತರ, ಮಕ್ಕಳನ್ನು ಚಿಕ್ಕ ಸಂಖ್ಯೆಯಿಂದ ದೊಡ್ಡ ಸಂಖ್ಯೆಯವರೆಗೆ ಕ್ರಮವಾಗಿ ನಿಲ್ಲಲು ಹೇಳಿ, ಆರೋಹಣ ಕ್ರಮವನ್ನು ಪರಿಚಯಿಸಿ. ನಂತರ ಅವರೋಹಣ ಕ್ರಮವನ್ನು ಪರಿಚಯಿಸಲು ದೊಡ್ಡ ಸಂಖ್ಯೆಯಿಂದ ಚಿಕ್ಕ ಸಂಖ್ಯೆಯವರೆಗೆ ಕ್ರಮವಾಗಿ ನಿಲ್ಲಲು ಹೇಳಿ.

ಅಭ್ಯಾಸ ಮಾಡೋಣ

ಕೊಟ್ಟಿರುವ ಸಂಖ್ಯೆಗಳನ್ನು ಆರೋಹಣ ಕ್ರಮದಲ್ಲಿ ಬರೆಯಿರಿ.

26, 71, 73, 56, 33



29, 82, 23, 76, 27



23, 35, 21, 12, 28



ಅಭ್ಯಾಸ ಮಾಡೋಣ

ಕೊಟ್ಟಿರುವ ಸಂಖ್ಯೆಗಳನ್ನು ಅವರೋಹಣ ಕ್ರಮದಲ್ಲಿ ಬರೆಯಿರಿ.

10, 47, 34, 25, 11



20, 52, 47, 65, 32



87, 56, 28, 73, 61



38, 59, 15, 78, 63



ಅನ್ವೇಷಿಸಿ ತಿಳಿಯೋಣ

1. ಪ್ರತಿ ಪೊಟ್ಟಣದಿಂದ 5 ಸಿಹಿ ಉಂಡೆಗಳನ್ನು ತೆಗೆದು ಹಾಕಿದರೆ ಯಾವ ಪೊಟ್ಟಣದಲ್ಲಿ ಅತಿ ದೊಡ್ಡ ಸಂಖ್ಯೆಯ ಸಿಹಿ ಉಂಡೆಗಳು ಉಳಿಯುತ್ತದೆ?



2. ನಾನು ಯಾರು? ಕಂಡುಹಿಡಿಯಿರಿ.

ನಾನು ಎರಡು ಅಂಕೆಗಳು ಒಂದೇ ಆಗಿರುವ ಅತ್ಯಂತ ಚಿಕ್ಕ ಎರಡು ಅಂಕಿಯ ಸಂಖ್ಯೆ.	
ನಾನು 30 ಮತ್ತು 60 ರ ನಡುವಿನ ಅತಿದೊಡ್ಡ ಸಂಖ್ಯೆ.	
ನನ್ನ ಎರಡು ಅಂಕೆಗಳು ಒಂದೇ ಆಗಿವೆ. ನಾನು ಅತಿ ದೊಡ್ಡ ಎರಡು ಅಂಕಿಯ ಸಂಖ್ಯೆ.	
ನಾನು 80 ಮತ್ತು 90 ರ ನಡುವಿನ ಚಿಕ್ಕ ಸಂಖ್ಯೆ.	

ಅನ್ವೇಷಿಸಿ ತಿಳಿಯೋಣ

ಚಿಕ್ಕ ಸಂಖ್ಯೆಯಿಂದ ದೊಡ್ಡ ಸಂಖ್ಯೆಗೆ ಅನುಕ್ರಮಗೊಳಿಸಿ ಬರೆಯಿರಿ.



64, 46, 84, 48, 68



ಚಿಕ್ಕ ಸಂಖ್ಯೆ



ಅತಿ ದೊಡ್ಡ ಸಂಖ್ಯೆ



ಸರಿಯಾದ ಕ್ರಮಕ್ಕೆ (✓) ಗುರುತು ಹಾಕಿ ಮತ್ತು ಕಾರಣಗಳನ್ನು ನೀಡಿ.



(ಅ) ಆರೋಹಣ ಕ್ರಮ

34, 36, 42, 45 ☐

34, 42, 38, 45 ☐

(ಆ) ಅವರೋಹಣ ಕ್ರಮ

91, 85, 79, 72 ☐

91, 79, 85, 72 ☐



ಯಾರು ಅದನ್ನು ಸರಿಯಾಗಿ ಮಾಡಿದರು?



ಸಂಖ್ಯೆಗಳ ಕ್ರಮವನ್ನು ಹುಡುಕಿ, ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

(ಅ) 32, 45, ___, 64


43


52


68

(ಆ) 88, 75, ___, 51


78


82


63

ನಿಮ್ಮ ಆಯ್ಕೆಯ ಯಾವುದೇ 5 ಎರಡು ಅಂಕಿಯ ಸಂಖ್ಯೆಗಳನ್ನು ಬರೆದು ಅವುಗಳನ್ನು ಆರೋಹಣ ಮತ್ತು ಅವರೋಹಣ ಕ್ರಮದಲ್ಲಿ ಬರೆಯಿರಿ.

ನಿಮ್ಮ ಆಯ್ಕೆಯ ಸಂಖ್ಯೆಗಳು _____, _____, _____, _____, _____.

ಆರೋಹಣ ಕ್ರಮ



ಅವರೋಹಣ ಕ್ರಮ



ಕಲಿಕಾ ಪರಿಶೀಲನೆ

ZD9FD

ಕೆಳಗಿನವುಗಳಿಗೆ ಉತ್ತರಿಸಿ.

1. 45 ಕ್ಕೆ 20 ಅಧಿಕವಾದರೆ _____ .

2. ಸಂಖ್ಯಾರೇಖೆಯ ಮೇಲೆ 35 ರ ಮೊದಲು ಮತ್ತು ನಂತರ ಬರುವ ಸಂಖ್ಯೆಗಳನ್ನು ಗುರುತಿಸಿ.



3. ಸಂಖ್ಯಾ ರೇಖೆಯಲ್ಲಿ ಹಿಂದಕ್ಕೆ ಜಿಗಿದು ಎಣಿಕೆಯ ಪೆಟ್ಟಿಗೆಗಳನ್ನು ಭರ್ತಿ ಮಾಡಿ.



40	36	32								

4. ಚಿಕ್ಕ ಸಂಖ್ಯೆಗೆ ವೃತ್ತ ಹಾಕಿರಿ.

37 73 13

5. ಕೊಟ್ಟಿರುವ ಸಂಖ್ಯೆಗಳನ್ನು ಆರೋಹಣ ಮತ್ತು ಅವರೋಹಣ ಕ್ರಮದಲ್ಲಿ ಬರೆಯಿರಿ.

45, 38, 19, 92, 76

ಆರೋಹಣ ಕ್ರಮ

ಅವರೋಹಣ ಕ್ರಮ

ನಾನು ಕಲಿತದ್ದು

ಸಂಖ್ಯೆಗಳು 0–99	ಕಾಣೆಯಾದ ಸಂಖ್ಯೆಗಳನ್ನು ಬರೆಯಿರಿ.	
ಸಂಖ್ಯೆಗಳ ಹೆಸರುಗಳು 21–99	ಈ ಕೆಳಗಿನ ಸಂಖ್ಯೆಗಳಿಗೆ ಸಂಖ್ಯಾ ಹೆಸರುಗಳನ್ನು ಬರೆಯಿರಿ.	
ಸಂಖ್ಯಾರೇಖೆಯ ಮೇಲೆ ಸಂಖ್ಯೆಗಳನ್ನು ಗುರುತಿಸುವುದು	ಕೊಟ್ಟಿರುವ ಸಂಖ್ಯೆಗಳನ್ನು ಸಂಖ್ಯಾರೇಖೆಯ ಮೇಲೆ ಗುರುತಿಸಿ.	
ಮುಂದಕ್ಕೆ ಮತ್ತು ಹಿಂದಕ್ಕೆ ಎಣಿಸುವುದು	ಹಕ್ಕಿ ತನ್ನ ಗೂಡನ್ನು ತಲುಪಲು ಮುಂದೆ ಹಾಯಬೇಕಾದ ಸಂಖ್ಯೆಗಳನ್ನು ಬರೆಯಿರಿ.	
ಮೊದಲು, ನಂತರ ಮತ್ತು ನಡುವೆ ಬರುವ ಸಂಖ್ಯೆ	ಪೆಟ್ಟಿಗೆಗಳಲ್ಲಿ ನೀಡಿರುವ ಉತ್ತರಗಳ ಸುಳಿವುಗಳಿಗೆ ಅನುಗುಣವಾಗಿ ಸಂಖ್ಯಾ ರೇಖೆಯ ಗುರುತು ಹಾಕಿ ಹೊಂದಿಸಿರಿ.	
ಎಣಿಕೆಯನ್ನು ಬಿಟ್ಟು ಬಿಡಿ	ಸಂಖ್ಯಾರೇಖೆಯ ಮೇಲೆ ಮುಂದಕ್ಕೆ ಬಿಡಿದು ಪೆಟ್ಟಿಗೆಗಳನ್ನು ಪೂರ್ಣಗೊಳಿಸಿ.	
ಅತಿ ದೊಡ್ಡ ಸಂಖ್ಯೆ – ಚಿಕ್ಕ ಸಂಖ್ಯೆ	ದೊಡ್ಡ ಸಂಖ್ಯೆಗೆ ವೃತ್ತ ಹಾಕಿ. 32 45 19 95 64 17 50 12 33	
ಆರೋಹಣ ಕ್ರಮ ಅವರೋಹಣ ಕ್ರಮ	ಕೊಟ್ಟಿರುವ ಸಂಖ್ಯೆಗಳನ್ನು ಆರೋಹಣ ಕ್ರಮದಲ್ಲಿ ಬರೆಯಿರಿ. 23, 35, 21, 12, 27	

2. ನೆರಳು ನೋಡು! ಹೆಸರು ಹೇಳು!

ಕಲಿಯೋಣ

PB9NZ

ರಾತ್ರಿಯ ವೇಳೆಯಲ್ಲಿ, ಪ್ರವೀಣ್ ಮತ್ತು ಯಾಮಿನಿ ಹೊಸದಾಗಿ ಖರೀದಿಸಿದ ಟಾರ್ಚ್‌ನೊಂದಿಗೆ ಆಟವಾಡುತ್ತಿದ್ದರು.



ಅವರು ವಿವಿಧ ಆಟದ ವಸ್ತುಗಳನ್ನು ತಯಾರಿಸುವುದನ್ನು ಮತ್ತು ಅವುಗಳ ನೆರಳುಗಳನ್ನು ನೋಡುವುದನ್ನು ಸಂತೋಷದಿಂದ ಮುಂದುವರಿಸಿದರು.

ಶಿಕ್ಷಕರ ಟಿಪ್ಪಣಿ

ಚಿತ್ರಕಥೆಯನ್ನು ನಿರೂಪಿಸಿ 'ವೃತ್ತ', 'ಚೌಕ', 'ಆಯತ' ಮತ್ತು 'ತ್ರಿಕೋನ' ದಂತಹ ಆಕಾರಗಳನ್ನು ಪರಿಚಯಿಸಿ.

ಮಾಡಿ ನೋಡೋಣ

ನೆರಳನ್ನು ನೋಡಿ! ಆಕಾರವನ್ನು ಹೇಳಿ!



ಶಿಕ್ಷಕರ ಟಿಪ್ಪಣಿ

ಚೌಕ, ಆಯತ, ವೃತ್ತ ಮತ್ತು ತ್ರಿಕೋನದಂತಹ ಆಕಾರಗಳನ್ನು ನೀಡುವ ವಸ್ತುಗಳನ್ನು ಸಂಗ್ರಹಿಸಿ. ಅವುಗಳನ್ನು ಒಂದೊಂದಾಗಿ ಮೇಜಿನ ಮೇಲೆ ಇರಿಸಿ ಮತ್ತು ಟಾರ್ಚ್ ಬೆಳಕನ್ನು ಬಳಸಿ ಅವುಗಳ ನೆರಳುಗಳನ್ನು ರಚಿಸಿ ಮತ್ತು ಮಕ್ಕಳಿಗೆ ನೆರಳುಗಳ ಆಕಾರಗಳನ್ನು ಹೆಸರಿಸಲು ಹೇಳಿ.

ಅಭ್ಯಾಸ ಮಾಡೋಣ

ಹೊಂದಿಸಿರಿ.



ಕೊಟ್ಟಿರುವ ನೆರಳಿಗೆ ಸೂಕ್ತವಾದ ವಸ್ತುವಿಗೆ (✓) ಗುರುತು ಹಾಕಿರಿ.



ಕಲಿಯೋಣ

ವಸ್ತುಗಳಲ್ಲಿ ಕಂಡುಬರುವ ಆಕಾರಗಳ ಹೆಸರುಗಳನ್ನು ನಾವು ತಿಳಿದುಕೊಳ್ಳೋಣವೇ?

				ಚೌಕ
				ಆಯತ
				ತ್ರಿಕೋನ
				ವೃತ್ತ

ಮಾಡಿ ನೋಡೋಣ



ಶಿಕ್ಷಕರ ಟಿಪ್ಪಣಿ

ಮಕ್ಕಳನ್ನು ಎರಡು ಗುಂಪುಗಳಾಗಿ ಜೋಡಿಸಿ. ಒಂದು ಗುಂಪು ತರಗತಿಯಲ್ಲಿ ಕಂಡುಬರುವ ವಸ್ತುವನ್ನು ಹೆಸರಿಸುತ್ತಾರೆ (ಉದಾ: ಕಪ್ಪು ಹಲಗೆ) ಮತ್ತು ಇನ್ನೊಂದು ಗುಂಪು ಆ ವಸ್ತುವಿಗೆ ಸಂಬಂಧಿಸಿದ ಆಕಾರವನ್ನು ಹೆಸರಿಸುತ್ತಾರೆ (ಉದಾ: ಆಯತ).

ಅಭ್ಯಾಸ ಮಾಡೋಣ

ಕೊಟ್ಟಿರುವ ವಸ್ತುವಿಗೆ ಸಂಬಂಧಿಸಿದ ಆಕಾರಕ್ಕೆ ಬಣ್ಣ ಹಾಕಿ ಮತ್ತು ಅದರ ಹೆಸರನ್ನು ಬರೆಯಿರಿ.

					ತ್ರಿಕೋನ .....
					.....
					.....
					.....

ಅನ್ವೇಷಿಸಿ ತಿಳಿಯೋಣ

ಕೊಟ್ಟಿರುವ ಆಕಾರಕ್ಕೆ ಸಂಬಂಧಿಸಿದ ವಸ್ತುವಿಗೆ ವೃತ್ತ ಹಾಕಿ.



ಯಾವ ಎರಡು ವಸ್ತುಗಳು ಒಂದೇ ಆಕಾರವನ್ನು ಹೊಂದಿವೆ?



ಕಲಿಯೋಣ



ಇವೆಲ್ಲವೂ ಚೌಕಗಳು.



ಇವೆಲ್ಲವೂ ಆಯತಗಳು.



ಇವೆಲ್ಲವೂ ತ್ರಿಕೋನಗಳು.



ಇವೆಲ್ಲವೂ ವೃತ್ತಗಳು.

ಮಾಡಿ ನೋಡೋಣ



ಶಿಕ್ಷಕರ ಟಿಪ್ಪಣಿ

ಮಕ್ಕಳನ್ನು ಎರಡು ಗುಂಪುಗಳಾಗಿ ಜೋಡಿಸಿ. ಅವರಿಗೆ ಸ್ವಲ್ಪ ಜೇಡಿಮಣ್ಣು ಮತ್ತು ಘನ, ಘನಾಕೃತಿ ಮತ್ತು ಸಿಲಿಂಡರ್ ಆಕಾರದ ಕೆಲವು ವಸ್ತುಗಳನ್ನು ನೀಡಿ. ಒಂದು ಗುಂಪಿಗೆ ಜೇಡಿಮಣ್ಣಿನ ಮೇಲೆ ಯಾವುದೇ ಒಂದು ವಸ್ತುವನ್ನು ಒತ್ತಲು ಹೇಳಿ. ಇನ್ನೊಂದು ಗುಂಪಿಗೆ ಮುದ್ರೆಯಿಂದ ರೂಪುಗೊಂಡ ಆಕಾರವನ್ನು ಗುರುತಿಸಿ ಹೆಸರಿಸಲು ಹೇಳಿ.

ಅಭ್ಯಾಸ ಮಾಡೋಣ

ಕೊಟ್ಟಿರುವ ವಸ್ತುಗಳ ಮೇಲೆ ಮುದ್ರೆ ಹಾಕಿ ಮತ್ತು ಪಡೆದ ಆಕಾರಗಳ ಹೆಸರುಗಳನ್ನು ಬರೆಯಿರಿ.

		
.....	.....	.....

ಅನ್ವೇಷಿಸಿ ತಿಳಿಯೋಣ

1. ಯಾವ ವಸ್ತುವಿನ ಮುದ್ರೆಯನ್ನು ಹಾಕುವ ಮೂಲಕ ವೃತ್ತಾಕಾರದ ಆಕಾರವನ್ನು ಪಡೆಯಲು ಸಾಧ್ಯವಿಲ್ಲ?




2. ಈ ಕೆಳಗಿನವುಗಳಲ್ಲಿ ಯಾವುದು ಆಯತವಾಗಿದೆ? ಏಕೆ?



ಕಲಿಯೋಣ

ಚಿತ್ರದಲ್ಲಿ ತೋರಿಸಿರುವಂತೆ, ಒಂದು ವಸ್ತುವಿನ ಸುತ್ತಲೂ ಗೆರೆ ಎಳೆಯುವುದನ್ನು ನೀವು ಎಂದಾದರೂ ನೋಡಿದ್ದೀರಾ?






ಅಭ್ಯಾಸ ಮಾಡೋಣ

ಕೊಟ್ಟಿರುವ ವಸ್ತುಗಳ ಸುತ್ತಲೂ ಗೆರೆ ಎಳೆದು ಮಾಡಿ ಮತ್ತು ಪಡೆದ ಆಕಾರಗಳ ಹೆಸರುಗಳನ್ನು ಬರೆಯಿರಿ.

		
.....	.....	.....

ಅನ್ವೇಷಿಸಿ ತಿಳಿಯೋಣ

1. ದಾಳದ ಘನದ ಎಲ್ಲಾ ಅಂಚುಗಳನ್ನು ಪತ್ತೆ ಹಚ್ಚುವುದರಿಂದ ಪಡೆದ ಆಕಾರಗಳು ಒಂದೇ ಆಗಿವೆಯೇ? ಕಾರಣ ನೀಡಿ.



2. ಬೆಂಕಿಕಡ್ಡಿಯ ಎಲ್ಲಾ ಅಂಚುಗಳನ್ನು ಪತ್ತೆಹಚ್ಚುವುದರಿಂದ ಪಡೆದ ಆಕಾರಗಳು ಒಂದೇ ಆಗಿವೆಯೇ? ಕಾರಣ ನೀಡಿ.



3. ಕಬಿಲನ್ ಒಂದು ವಸ್ತುವಿನ ಸುತ್ತಲೂ ಗೆರೆ ಎಳೆದು ಒಂದು ಚೌಕವನ್ನು ಪಡೆದನು. ಅವನು ಯಾವ ವಸ್ತುವನ್ನು ಟ್ರೇಸ್ ಮಾಡಿರಬಹುದು?






ಅನ್ವೇಷಿಸಿ ತಿಳಿಯೋಣ

ರೇಖಾಗಣಿತದ ಹಲಗೆಯನ್ನು ಗಮನಿಸಿ ಮತ್ತು ಪಕ್ಕದ ಚುಕ್ಕೆಗಳ ಜಾಲದಲ್ಲಿ ವಿವಿಧ ಗಾತ್ರಗಳ ನಿರ್ದಿಷ್ಟ ಆಕಾರಗಳನ್ನು ರಚಿಸಿರಿ.







ಒಂದೇ ರೀತಿಯ, ಸಂಬಂಧಿತ ಆಕಾರಗಳನ್ನು ಒಂದೇ ರೀತಿಯ ಬಣ್ಣ ಹಾಕಿ ಮತ್ತು ಪ್ರತಿಯೊಂದನ್ನು ಎಣಿಸಿ.





ಮಾಡಿ ನೋಡೋಣ



ಶಿಕ್ಷಕರ ಟಿಪ್ಪಣಿ

ಮಕ್ಕಳನ್ನು ಎರಡು ಗುಂಪುಗಳಾಗಿ ಜೋಡಿಸಿ. ಅವರಿಗೆ ಕಾಗದದ ರಟ್ಟುಗಳಿಂದ ಕತ್ತರಿಸಿದ ವಿವಿಧ ಗಾತ್ರದ ಆಕಾರಗಳನ್ನು ನೀಡಿ. ಅವರ ಬದಿ ಮತ್ತು ಮೂಲೆಗಳ ಆಧಾರದ ಮೇಲೆ ಆಕಾರಗಳನ್ನು ವಿಂಗಡಿಸಿ.

ಅಭ್ಯಾಸ ಮಾಡೋಣ

ಬದಿಗಳು ಇರುವ ಆಕಾರಗಳಿಗೆ ವೃತ್ತ ಹಾಕಿ.



ಕೊಟ್ಟಿರುವ ಆಕಾರಗಳ ಮೂಲೆಗಳನ್ನು ಗುರುತಿಸಿ.



ಅನ್ವೇಷಿಸಿ ತಿಳಿಯೋಣ

1. ಯಾವ ಆಕಾರ ಭಿನ್ನವಾಗಿದೆ? ಏಕೆ?



2. ಸಮಾನ ಗಾತ್ರದ ಎರಡು ಚೌಕಗಳನ್ನು ಅಕ್ಕಪಕ್ಕದಲ್ಲಿ ಸೇರಿಸಿದಾಗ ಯಾವ ಆಕಾರ ಉಂಟಾಗುತ್ತದೆ?



- ◯ ವೃತ್ತ
- ◯ ತ್ರಿಕೋನ
- ◯ ಆಯತ

3. ಖಾಲಿ ಜಾಗಗಳನ್ನು ಭರ್ತಿ ಮಾಡಿ

ಮೂಲೆಗಳಿಲ್ಲದ ಆಕಾರಗಳು ..... ಬದಿಗಳು ಮತ್ತು ಮೂಲೆಗಳನ್ನು ಹೊಂದಿರುವ ಆಕಾರಗಳು .....

ಮಾಡಿ ನೋಡೋಣ



ಶಿಕ್ಷಕರ ಟಿಪ್ಪಣಿ

ಮಕ್ಕಳನ್ನು ಎರಡು ಗುಂಪುಗಳಾಗಿ ಜೋಡಿಸಿ ಮತ್ತು ಅವರಿಗೆ ಕತ್ತರಿಸಿದ ರಟ್ಟುಗಳ ಆಕಾರಗಳನ್ನು ನೀಡಿ. ಪ್ರತಿ ಗುಂಪಿಗೂ ಮಾದರಿಯನ್ನು ರಚಿಸಲು ಆಕಾರಗಳನ್ನು ಬಳಸಲು ಹೇಳಿ. ರಚಿಸಲಾದ ಮಾದರಿಗಳನ್ನು ಚರ್ಚಿಸಲು ಹೇಳಿ.

ಅಭ್ಯಾಸ ಮಾಡೋಣ

ಮುಂದಿನ ಮಾದರಿಯನ್ನು ಎಳೆಯಿರಿ.



ಖಾಲಿ ಇರುವ ಜಾಗವನ್ನು ಭರ್ತಿ ಮಾಡಿ ಮತ್ತು ಮಾದರಿಯನ್ನು ಪೂರ್ಣಗೊಳಿಸಿ.



ಕಲಿಯೋಣ

ಅರುಣ್ ಮತ್ತು ಅಭಿ ಕಾಣೆಯಾದ ಕುರಿಮರಿಯನ್ನು ಹುಡುಕುತ್ತಾ ಹೋದರು; ಇಬ್ಬರಲ್ಲಿ, ಅದನ್ನು ಯಾರು ಕಂಡುಹಿಡಿದರು?





ಎಲೆಯ ಗುರುತುಗಳನ್ನು ಬಳಸಿಕೊಂಡು ಮಾದರಿಗಳನ್ನು ರಚಿಸಲಾಗಿದೆ.



ನಿಂಬೆಯ ಗುರುತುಗಳನ್ನು ಬಳಸಿ ರಚಿಸಲಾದ ಮಾದರಿಗಳು.



ಅಭ್ಯಾಸ ಮಾಡೋಣ

ಬೆಂಡೆಕಾಯಿಯನ್ನು ಬಳಸಿ ನಿಮಗೆ ಇಷ್ಟವಾದ ಮಾದರಿಗಳನ್ನು ರಚಿಸಿ.



ಕಲಿಕಾ ಪರಿಶೀಲನೆ

ZA3ZP

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಕೊಟ್ಟಿರುವ ವಸ್ತುವಿಗೆ ಸಂಬಂಧಿಸಿದ ಆಕಾರಕ್ಕೆ ಬಣ್ಣ ಹಚ್ಚಿ ಮತ್ತು ಅದರ ಹೆಸರನ್ನು ಬರೆಯಿರಿ.



2. ಬದಿಗಳು ಮತ್ತು ಮೂಲೆಗಳಿಲ್ಲದ ಆಕೃತಿಯನ್ನು ವೃತ್ತ ಹಾಕಿ.



3. ಕೊಟ್ಟಿರುವ ವಸ್ತುವಿನ ಗುರುತು ಹಾಕುವುದರಿಂದ ಪಡೆದ ಆಕಾರದ ಹೆಸರನ್ನು ಬರೆಯಿರಿ.



.....

4. ಎರೇಸರ್‌ನ ಎಲ್ಲಾ ಅಂಚುಗಳನ್ನು ಪತ್ತೆಹಚ್ಚುವುದರಿಂದ ಆಕಾರಗಳು ಒಂದೇ ಆಗಿವೆಯೇ? ಕಾರಣ ನೀಡಿ.



5. ಕಾಣೆಯಾದದನ್ನು ಭರ್ತಿ ಮಾಡಿ ಮತ್ತು ಮಾದರಿಯನ್ನು ಪೂರ್ಣಗೊಳಿಸಿ.



ನಾನು ಕಲಿತದ್ದು

ಆಕಾರಗಳನ್ನು ರಚಿಸುವುದು.		
ಆಕಾರಗಳನ್ನು ವರ್ಗೀಕರಿಸುವುದು.		
ಇದರೊಂದಿಗೆ ಆಕಾರಗಳನ್ನು ವೃತ್ತ ಹಾಕಿ.		
ಆಕಾರಗಳಲ್ಲಿ ಮಾದರಿಗಳು.		

3. ಒಟ್ಟು ಬಣ್ಣದ ಪೆನ್ಸಿಲ್‌ಗಳು

ಕಲಿಯೋಣ

ವೆನ್ಮತಿ ಮತ್ತು ಶರಣ್ ಅವರ ಬಳಿ ಇರುವ ಒಟ್ಟು ಬಣ್ಣದ ಪೆನ್ಸಿಲ್‌ಗಳ ಸಂಖ್ಯೆಯನ್ನು ಕಂಡುಹಿಡಿಯಲು ನಾವು ಸಹಾಯ ಮಾಡೋಣ.

EZ4FV



ಶಿಕ್ಷಕರ ಟಿಪ್ಪಣಿ

ಮೇಲಿನ ಪರಿಸ್ಥಿತಿಯನ್ನು ಮಕ್ಕಳೊಂದಿಗೆ ಚರ್ಚಿಸಿ. ಏಕ ಅಂಕಿಯ ಸಂಖ್ಯೆಗಳ (ಮೊತ್ತ 20 ಮೀರದ) ಸೇರ್ಪಡೆಯನ್ನು ನೆನಪಿಸಿಕೊಳ್ಳಲು ಅವರನ್ನು ಪ್ರೋತ್ಸಾಹಿಸಿ.

ಅಭ್ಯಾಸ ಮಾಡೋಣ

ಸಂಖ್ಯೆಗಳ ಪ್ರಕಾರ ಎರಡು ವಿಭಿನ್ನ ಬಣ್ಣಗಳನ್ನು ಬಳಸಿ ಮಣಿಗಳನ್ನು ಬಿಡಿಸಿ ಒಟ್ಟು ಮೊತ್ತವನ್ನು ಕಂಡುಹಿಡಿಯಿರಿ.

7+6		7 + 6 =
8+4		8 + 4 =
9+5		9 + 5 =

ಕೂಡಿರಿ ಮತ್ತು ಬರೆಯಿರಿ.

7	8	6	9	8	9
+ 5	+ 6	+ 4	+ 7	+ 5	+ 8

ಕಲಿಯೋಣ

ಕೂಡಿರಿ. 35+28



35 + 28 = 63

ಮರು ಗುಂಪು ಮಾಡಿ ಕೂಡಿರಿ

	ಹತ್ತುಗಳು	ಒಂದುಗಳು
	3	5
+	2	8

ಹಂತ–1 ಹತ್ತುಗಳನ್ನು ಸೇರಿಸಿ.
5 ಒಂದುಗಳು + 8 ಒಂದುಗಳು = 13 ಒಂದುಗಳು

	ಹತ್ತುಗಳು	ಒಂದುಗಳು
	1	
	3	5
+	2	8
		3

ಹಂತ–2 ಒಂದುಗಳನ್ನು ಹತ್ತುಗಳನ್ನಾಗಿ ಪರಿವರ್ತಿಸಿರಿ
13 ಒಂದುಗಳು = 1 ಹತ್ತು + 3 ಒಂದುಗಳು

	ಹತ್ತುಗಳು	ಒಂದುಗಳು
	1	
	3	5
+	2	8
	6	3

ಹಂತ–3 ಹತ್ತುಗಳನ್ನು ಸೇರಿಸಿ.
1 ಹತ್ತು + 3 ಹತ್ತುಗಳು + 2 ಹತ್ತುಗಳು + = 6 ಹತ್ತುಗಳು

ಅಭ್ಯಾಸ ಮಾಡೋಣ

ನನ್ನ ಬಳಿ 35 ಮಣಿಗಳಿವೆ ಮತ್ತು ನಿಮ್ಮ ಬಳಿ 18 ಮಣಿಗಳಿವೆ, ನಮ್ಮ ಬಳಿ ಇರುವ ಒಟ್ಟು ಮಣಿಗಳ ಸಂಖ್ಯೆಯನ್ನು ಕಂಡುಹಿಡಿಯೋಣವೇ?



ನಾವು 13 ಒಂದುಗಳ ಮಣಿಗಳನ್ನು 1 ಹತ್ತು ಮಣಿಗಳ ದಾರ ಮತ್ತು 3 ಒಂದುಗಳ ಮಣಿಗಳಾಗಿ ಮರು ಗುಂಪು ಮಾಡುವ ಮೂಲಕ ಸೇರಿಸೋಣ.

ಶಿಕ್ಷಕರ ಟಿಪ್ಪಣಿ

ಮಣಿಗಳು ಮತ್ತು ಮಣಿಗಳ ದಾರಗಳನ್ನು ಬಳಸಿಕೊಂಡು, ಪುನರ್ ವಿಂಗಡಣೆ ಮಾಡುವ ಮೂಲಕ (ಮೊತ್ತ 99 ಮೀರದಂತೆ) ಸಂಕಲನವನ್ನು ಅಭ್ಯಾಸ ಮಾಡಿ.

ಅಭ್ಯಾಸ ಮಾಡೋಣ

ಖಾಲಿ ಜಾಗವನ್ನು ಭರ್ತಿ ಮಾಡಿ.

1 ಹತ್ತು ಮತ್ತು 13 ಒಂದುಗಳು = 2 ಹತ್ತುಗಳು ಮತ್ತು 3 ಒಂದುಗಳು

1 ಹತ್ತು ಮತು 17 ಒಂದುಗಳು = _____ ಹತ್ತುಗಳು ಮತ್ತು _____ ಒಂದುಗಳು

2 ಹತ್ತುಗಳು ಮತ್ತು 15 ಒಂದುಗಳು = _____ ಹತ್ತುಗಳು ಮತ್ತು _____ ಒಂದುಗಳು

5 ಹತ್ತುಗಳು ಮತ್ತು 12 ಒಂದುಗಳು = _____ ಹತ್ತುಗಳು ಮತ್ತು _____ ಒಂದುಗಳು

4 ಹತ್ತುಗಳು ಮತ್ತು 14 ಒಂದುಗಳು = _____ ಹತ್ತುಗಳು ಮತ್ತು _____ ಒಂದುಗಳು

3 ಹತ್ತುಗಳು ಮತ್ತು16 ಒಂದುಗಳು = _____ ಹತ್ತುಗಳು ಮತ್ತು _____ ಒಂದುಗಳು

2 ಹತ್ತುಗಳು ಮತ್ತು 11 ಒಂದುಗಳು = _____ ಹತ್ತುಗಳು ಮತ್ತು _____ ಒಂದುಗಳು

5 ಹತ್ತುಗಳು ಮತ್ತು18 ಒಂದುಗಳು = _____ ಹತ್ತುಗಳು ಮತ್ತು _____ ಒಂದುಗಳು

ಮಣಿಗಳನ್ನು ಮತ್ತೆ ಜೋಡಿಸಿ ಮತ್ತು ಮೊತ್ತವನ್ನು ಕಂಡುಹಿಡಿ

25 + 7 = ?





	ಹ	ಒ
	1	
	2	5
+		7
	3	2

49 + 5 = ?





	ಹ	ಒ
+		

ಅಭ್ಯಾಸ ಮಾಡೋಣ

ಮಣಿಗಳನ್ನು ಬಳಸಿ, ಮೊತ್ತವನ್ನು ಕಂಡುಹಿಡಿಯಿರಿ.

ಹ	ಒ
1	
1	8
+	5
2	3

ಹ	ಒ
1	7
+	6

ಹ	ಒ
1	9
+	8

ಹ	ಒ
2	2
+ 1	7

ಹ	ಒ
2	9
+ 1	2

ಹ	ಒ
5	2
+ 2	8

ಹ	ಒ
6	9
+ 2	3

ಹ	ಒ
7	6
+ 1	9

ಹ	ಒ
4	7
+ 1	5

ಹ	ಒ
3	8
+ 3	7

ಒಟ್ಟು ಮೊತ್ತವನ್ನು ಕಂಡುಹಿಡಿಯಿರಿ.

ನೀವು ಹೊಂದಿರುವ ಮೊತ್ತ	ನಿಮ್ಮ ಸ್ನೇಹಿತ ಹೊಂದಿರುವ ಮೊತ್ತ	ನೀವಿಬ್ಬರೂ ಹೊಂದಿರುವ ಒಟ್ಟು ಮೊತ್ತ
		ಹ ಒ +
		ಹ ಒ +
		ಹ ಒ +

ಅಭ್ಯಾಸ ಮಾಡೋಣ

ಮಣಿ ಹಾರವನ್ನು ಬಳಸಿಕೊಂಡು ಮೊತ್ತವನ್ನು ಕಂಡುಹಿಡಿಯಿರಿ.

28 + 7 = 35



17 + 9 =

29 + 7 =

28 + 6 =

ಮಣಿ ಹಾರವನ್ನು ಬಳಸಿಕೊಂಡು ಮೊತ್ತವನ್ನು ಕಂಡುಹಿಡಿಯಿರಿ.

28 + 19 = 47



19 + 17 =

29 + 19 =

25 + 17 =

ಅಭ್ಯಾಸ ಮಾಡೋಣ

ಸಂಖ್ಯಾ ರೇಖೆಯನ್ನು ಬಳಸಿಕೊಂಡು ಮೊತ್ತವನ್ನು ಕಂಡುಹಿಡಿಯಿರಿ.

16 + 9 = 25



18 + 7 =



14 + 8 =



15 + 7 =



9 + 18 = 27



15 + 15 =



8 + 17 =



9 + 19 =



ಅನ್ವೇಷಿಸಿ ತಿಳಿಯೋಣ

ಸಂಖ್ಯಾ ರೇಖೆಯನ್ನು ಗಮನಿಸಿ ಸಂಕಲನದ ಲೆಕ್ಕವನ್ನು ಪೂರ್ಣಗೊಳಿಸಿ.

8 + ☐ = 27



16 + ☐ = 30



☐ + ☐ = ☐



☐ + ☐ = ☐



ಅಭ್ಯಾಸ ಮಾಡೋಣ

ಮೊತ್ತವನ್ನು ಕಂಡುಹಿಡಿಯಿರಿ.

ಹ	ಒ	ಹ	ಒ	ಹ	ಒ	ಹ	ಒ	ಹ	ಒ
1									
3	5	4	7	5	8	6	2	3	4
+ 2	6	+ 3	8	+ 1	9	+ 1	8	+ 5	7
6	1								

ಹ	ಒ	ಹ	ಒ	ಹ	ಒ	ಹ	ಒ	ಹ	ಒ
4	5	2	7	3	6	1	9	4	5
+ 3	6	+ 2	9	+ 1	8	+ 2	8	+ 4	5

ಅನ್ವೇಷಿಸಿ ತಿಳಿಯೋಣ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಒಂದು ಬುಟ್ಟಿಯಲ್ಲಿ 55 ಮಾವಿನ ಹಣ್ಣುಗಳಿವೆ, ಮತ್ತು ಇನ್ನೊಂದು ಬುಟ್ಟಿಯಲ್ಲಿ 38 ಮಾವಿನ ಹಣ್ಣುಗಳಿವೆ. ಎರಡು ಬುಟ್ಟಿಗಳಲ್ಲಿ ಒಟ್ಟು ಎಷ್ಟು ಮಾವಿನ ಹಣ್ಣುಗಳಿವೆ?



	ಹ	ಒ
+		

2. ಮೀನಾ 28 ಚಿಪ್ಪುಗಳನ್ನು ಸಂಗ್ರಹಿಸಿದಳು. ಅವಳ ಸ್ನೇಹಿತೆ ಅವಳಿಗೆ ಇನ್ನೂ 15 ಚಿಪ್ಪುಗಳನ್ನು ಕೊಟ್ಟಳು. ಮೀನಾ ಬಳಿ ಈಗ ಒಟ್ಟು ಎಷ್ಟು ಚಿಪ್ಪುಗಳಿವೆ?



	ಹ	ಒ
+		

3. ಕಲಾಳ ಬಳಿ 26 ಪೆನ್ಸಿಲ್‌ಗಳಿವೆ. ಮಾಲಾಳ ಬಳಿ ಕಲಾಳಿಗಿಂತ 14 ಪೆನ್ಸಿಲ್‌ಗಳು ಹೆಚ್ಚು ಇದ್ದರೆ, ಮಾಲಾಳ ಬಳಿ ಎಷ್ಟು ಪೆನ್ಸಿಲ್‌ಗಳಿವೆ?



	ಹ	ಒ
+		

4. ಕಬಿಲನ್ ಬಳಿ 13 ಆಟಿಕೆಗಳಿವೆ. ಅವನ ಚಿಕ್ಕಪ್ಪ ಅವನಿಗೆ ಇನ್ನೂ 9 ಆಟಿಕೆಗಳನ್ನು ಉಡುಗೊರೆಯಾಗಿ ನೀಡಿದರು. ಈಗ ಕಬಿಲನ್ ಬಳಿ ಎಷ್ಟು ಆಟಿಕೆಗಳಿವೆ?



	ಹ	ಒ
+		

ಕಲಿಕಾ ಪರಿಶೀಲನೆ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಮಣಿಗಳನ್ನು ಎಣಿಸಿ, ಬರೆದು ಸೇರಿಸಿ.



ಹ	ಒ
+	

2. ಸೇರಿಸಿ ಬರೆಯಿರಿ.

ಹ	ಒ
5	6
+ 3	9

3. ಮಣಿ ಹಾರವನ್ನು ಬಳಸಿಕೊಂಡು ಮೊತ್ತವನ್ನು ಕಂಡುಹಿಡಿಯಿರಿ.

27 + 18 = ☐

4. ಸಂಖ್ಯಾ ರೇಖೆಯನ್ನು ಬಳಸಿಕೊಂಡು ಮೊತ್ತವನ್ನು ಕಂಡುಹಿಡಿಯಿರಿ.

15 + 14 = ☐



5. ಮೀನಾ ₹35 ಉಳಿಸಿದ್ದಳು. ಅವಳ ತಂದೆ ಅವಳಿಗೆ ₹59 ಹೆಚ್ಚು ಹಣ ಕೊಟ್ಟರು. ಮೀನಾ ಈಗ ತನ್ನ ಉಳಿತಾಯದಲ್ಲಿ ಒಟ್ಟು ಎಷ್ಟು ಹಣವನ್ನು ಹೊಂದಿದ್ದಾಳೆ?



ಹ	ಒ
+	

ನಾನು ಕಲಿತದ್ದು

99 ಕ್ಕಿಂತ ಮೀರದಂತಹ ಮೊತ್ತದೊಂದಿಗೆ ಸಂಖ್ಯೆಗಳ ಸಂಕಲನ (ಮರು ಗುಂಪು ಮಾಡುವಿಕೆಯೊಂದಿಗೆ)	ಕೆಳಗಿನ ಮತ್ತು ಬರೆಯಿರಿ. ಹ ಒ: 1 5 2 + 2 8 = 8 0; 6 9 + 2 3 = ; 7 6 + 1 9 = ; 4 7 + 1 5 = ; 3 8 + 3 7 =
ಕಥೆಯ ಸಮಸ್ಯೆಗಳಿಗೆ ಉತ್ತರ ಹುಡುಕುವುದು	ಮೀನಾ 28 ಚಿಪ್ಪುಗಳನ್ನು ಸಂಗ್ರಹಿಸಿದಳು. ಅವಳ ಸ್ನೇಹಿತೆ ಅವಳಿಗೆ ಇನ್ನೂ 15 ಚಿಪ್ಪುಗಳನ್ನು ಕೊಟ್ಟಳು. ಮೀನಾ ಬಳಿ ಈಗ ಒಟ್ಟು ಎಷ್ಟು ಚಿಪ್ಪುಗಳಿವೆ?  ಹ ಒ + ☐

ನನ್ನಿಂದ ಸಾಧ್ಯ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಸಂಖ್ಯಾರೇಖೆಯ ಮೇಲೆ ಮುಂದಕ್ಕೆ ಜಿಗಿದು ಪೆಟ್ಟಿಗೆಗಳನ್ನು ಪೂರ್ಣಗೊಳಿಸಿ.



0										

2. ಆರೋಹಣ ಮತ್ತು ಅವರೋಹಣ ಕ್ರಮದಲ್ಲಿ ಬರೆಯಿರಿ.

52, 37, 48, 29, 61

ಆರೋಹಣ ಕ್ರಮ

ಅವರೋಹಣ ಕ್ರಮ

3. ಕೊಟ್ಟಿರುವ ಆಕಾರಕ್ಕೆ ಸಂಬಂಧಿಸಿದ ವಸ್ತುವನ್ನು (✓) ಗುರುತಿಸಿ.



4. ಸೇರಿಸಿ ಬರೆಯಿರಿ.

	ಹ	ಒ
	3	5
+	2	8

5. ಒಂದು ಬುಟ್ಟಿಯಲ್ಲಿ 48 ಸೇಬುಗಳು ಮತ್ತು ಇನ್ನೊಂದು ಬುಟ್ಟಿಯಲ್ಲಿ 47 ಸೇಬುಗಳಿವೆ. ಎರಡೂ ಬುಟ್ಟಿಗಳಲ್ಲಿ ಒಟ್ಟು ಎಷ್ಟು ಸೇಬುಗಳಿವೆ?





	ಹ	ಒ
+		

ಮೌಖಿಕ ಕಾರ್ಯ

ಸರಿ ತಪ್ಪು ಹೇಳಿರಿ

i) 65, 75 ಕ್ಕಿಂತ 10 ಅಧಿಕವಾಗಿದೆ.

ii) 80 ಕ್ಕಿಂತ ಕಡಿಮೆ ಇರುವ 1 ಸಂಖ್ಯೆ 81.

iii) ಸಂಖ್ಯೆಗಳ ಮೌಲ್ಯವು ಆರೋಹಣ ಕ್ರಮದಲ್ಲಿ ಹೆಚ್ಚಾಗುತ್ತದೆ.

iv) ಬದಿ ಮತ್ತು ಮೂಲೆಗಳಿಲ್ಲದ ಆಕಾರವು ತ್ರಿಕೋನವಾಗಿದೆ.

v) ಉಮಾಗೆ 25 ಹೂವುಗಳು ಮತ್ತು ರಾಮನಿಗೆ 25 ಹೂವುಗಳು ಇದ್ದರೆ, ಆಗ ಇಬ್ಬರಿಗೂ ಒಟ್ಟು 50 ಹೂವುಗಳು ಇರುತ್ತವೆ.

7. ದೋಷವನ್ನು ಗುರುತಿಸಿ ಮತ್ತು ಹೇಳಿ.

ಹ	ಒ
2	
5	8
+ 1	4
8	1

ಹ	ಒ
4	7
+ 1	5
5	12

ಹ	ಒ
	1
3	6
+ 1	8
4	4

ಹ	ಒ
1	
7	2
+ 1	8
8	0

ಹ	ಒ
6	4
+ 1	0
61	40

ಯೋಜನೆ

8. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

i) 47, 82, 96, 35, 58, 17, 72, 68, 39, 26 ರಲ್ಲಿ ನಿಮ್ಮ ನೆಚ್ಚಿನ ಐದು ಸಂಖ್ಯೆಗಳನ್ನು ಬರೆಯಿರಿ.

_____ _____ _____ _____ _____

ii) ಇವುಗಳಲ್ಲಿ ಅತಿ ದೊಡ್ಡ ಸಂಖ್ಯೆ _____

iii) ಇವುಗಳಲ್ಲಿ ಚಿಕ್ಕ ಸಂಖ್ಯೆ _____

iv) ಇವುಗಳನ್ನು ಆರೋಹಣ ಕ್ರಮದಲ್ಲಿ ಬರೆಯಿರಿ _____

v) ಇವುಗಳನ್ನು ಅವರೋಹಣ ಕ್ರಮದಲ್ಲಿ ಬರೆಯಿರಿ _____

9. ನಿಮ್ಮ ಐದು ಸ್ನೇಹಿತರಲ್ಲಿ ಅವರ ಪೋಷಕರ ವಯಸ್ಸನ್ನು ಕೇಳಿ, ಬರೆದು ಕೂಡಿಸಿ.

ಸ್ನೇಹಿತನ ಹೆಸರು					
ತಂದೆಯ ವಯಸ್ಸು					
ತಾಯಿಯ ವಯಸ್ಸು					
ಒಟ್ಟು ವಯಸ್ಸು					

ಘಟಕ II

4. ನಾವು ಹೇಗೆ ವೇಗವಾಗಿ ಎಣಿಸಬಹುದು?

ಕಲಿಯೋಣ

VA2NR

ಒಬ್ಬ ತೆಂಗಿನಕಾಯಿ ಮಾರಾಟಗಾರ ಎರಡು ತೆಂಗಿನ ಕಾಯಿಗಳ ರಾಶಿಯನ್ನು ಇಟ್ಟಿದ್ದನು. ಅಷ್ಟರಲ್ಲಿ, ಅವನ ಮಕ್ಕಳಾದ ಆಲ್ವಿನ್ ಮತ್ತು ಏಂಜೆಲ್ ಅಲ್ಲಿಗೆ ಬಂದರು.





ಆ ಸಮಯದಲ್ಲಿ, ತೆಂಗಿನಕಾಯಿಗಳನ್ನು ಎಣಿಸಿದ ನಂತರ ಅವರ ತಾಯಿ ಊಟಕ್ಕೆ ಕರೆದರು. ಅವರು ಬರುವುದಾಗಿ ಉತ್ತರಿಸಿದರು.









ಶಿಕ್ಷಕರ ಟಿಪ್ಪಣಿ

ವಸ್ತುಗಳನ್ನು ಒಂದೊಂದಾಗಿ ಎಣಿಸುವ ಬದಲು ಸಮಾನ ಗುಂಪುಗಳಾಗಿ ಜೋಡಿಸುವುದರಿಂದ ಅವುಗಳನ್ನು ವೇಗವಾಗಿ ಎಣಿಸಬಹುದು ಎಂದು ವಿವರಿಸಲು ಕಥೆಯನ್ನು ನಿರೂಪಿಸಿ.

ಮಾಡಿ ನೋಡೋಣ





ಶಿಕ್ಷಕರ ಟಿಪ್ಪಣಿ

ಮೊದಲ ಗುಂಪಿಗೆ ಕೋಲುಗಳನ್ನು ನೆಲದ ಮೇಲೆ ಇಡಲು ಹೇಳಿ (99 ಕ್ಕಿಂತ ಮೀರದಂತೆ). ಎರಡನೇ ಗುಂಪಿಗೆ ಕೋಲುಗಳನ್ನು ಸಮಾನ ಗುಂಪುಗಳಾಗಿ ಜೋಡಿಸಿ ಒಟ್ಟು ಮೊತ್ತವನ್ನು ಪುನರಾವರ್ತಿತ ಸಂಕಲನವಾಗಿ ವ್ಯಕ್ತಪಡಿಸಲು ಹೇಳಿ (ಉದಾ. 3+3+3+3=12). ಮೂರನೇ ಗುಂಪು ಅದನ್ನು ವಾಕ್ಯದ ರೂಪದಲ್ಲಿ ಹೇಳಬೇಕು. (ಉದಾ: 4 ಬಾರಿ 3 ಎಂದರೆ 12).

ಅಭ್ಯಾಸ ಮಾಡೋಣ



ಸಮಾನ ಗುಂಪುಗಳ ಸಂಖ್ಯೆ 4

ಪ್ರತಿ ಗುಂಪಿನಲ್ಲಿರುವ ಕೋಳಿಗಳ ಸಂಖ್ಯೆ 2 ತಲಾ

2 ಕೋಳಿಗಳ 4 ಗುಂಪುಗಳು

ಒಟ್ಟು ಕೋಳಿಗಳ ಸಂಖ್ಯೆ= 2 + 2 + 2 + 2 = 8

4 ಬಾರಿ 2 ಎಂದರೆ 8



ಸಮಾನ ಗುಂಪುಗಳ ಸಂಖ್ಯೆ _____

ಪ್ರತಿ ಗುಂಪಿನಲ್ಲಿರುವ ನಾಯಿಮರಿಗಳ ಸಂಖ್ಯೆ _____ ತಲಾ

_____ ನಾಯಿಮರಿಗಳ _____ ಸಂಖ್ಯೆ.

ಒಟ್ಟು ನಾಯಿಮರಿಗಳ ಸಂಖ್ಯೆ = _____

_____ ಬಾರಿ _____ ಎಂದರೆ _____



ಸಮಾನ ಗುಂಪುಗಳ ಸಂಖ್ಯೆ _____

ಪ್ರತಿ ಗುಂಪಿನಲ್ಲಿರುವ ಕಪ್ಪೆಗಳ ಸಂಖ್ಯೆ _____ ತಲಾ

_____ ಕಪ್ಪೆಗಳ _____ ಸಂಖ್ಯೆ

ಒಟ್ಟು ಕಪ್ಪೆಗಳ ಸಂಖ್ಯೆ = _____

_____ ಬಾರಿ _____ ಎಂದರೆ _____

ಅಭ್ಯಾಸ ಮಾಡೋಣ

ಚಿತ್ರಗಳನ್ನು ಗಮನಿಸಿ ಕೋಷ್ಟಕವನ್ನು ಭರ್ತಿ ಮಾಡಿ

	2 + 2 + 2 + 2 + 2 = 10 5 ಬಾರಿ 2 ಎಂದರೆ 10
	_____ ____ ಬಾರಿ ____ ಎಂದರೆ ____
	_____ ____ ಬಾರಿ ____ ಎಂದರೆ ____
	_____ ____ ಬಾರಿ ____ ಎಂದರೆ ____
	_____ ____ ಬಾರಿ ____ ಎಂದರೆ ____
	_____ ____ ಬಾರಿ ____ ಎಂದರೆ ____
	_____ ____ ಬಾರಿ ____ ಎಂದರೆ ____
	_____ ____ ಬಾರಿ ____ ಎಂದರೆ ____
	_____ ____ ಬಾರಿ ____ ಎಂದರೆ ____

ಅಭ್ಯಾಸ ಮಾಡೋಣ

ಚಿತ್ರಗಳನ್ನು ಗಮನಿಸಿ ಕೋಷ್ಟಕವನ್ನು ಭರ್ತಿ ಮಾಡಿ.

	2 1 ಬಾರಿ 2 ಎಂದರೆ 2
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____

ಅಭ್ಯಾಸ ಮಾಡೋಣ

ಸಂಖ್ಯಾ ರೇಖೆಯನ್ನು ಪೂರ್ಣಗೊಳಿಸಿ ಮತ್ತು ಕೋಷ್ಟಕವನ್ನು ಭರ್ತಿ ಮಾಡಿ.



2	1 ಬಾರಿ 2 ಎಂದರೆ 2
2 + 2 = 4	2 ಬಾರಿ 2 ಎಂದರೆ 4
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____

ಚಿತ್ರಗಳನ್ನು ಗಮನಿಸಿ ಕೋಷ್ಟಕವನ್ನು ಭರ್ತಿ ಮಾಡಿ.

	1 ಬಾರಿ 3 ಎಂದರೆ 3
	2 ಬಾರಿ 3 ಎಂದರೆ 6
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____

ಅಭ್ಯಾಸ ಮಾಡೋಣ

ಸಂಖ್ಯಾ ರೇಖೆಯ ಮೇಲೆ ಮೂರು ರೇಖೆಯನ್ನು ಮುಂದಕ್ಕೆ ಎಳೆಯುವ ಮೂಲಕ ಕೋಷ್ಟಕವನ್ನು ಭರ್ತಿ ಮಾಡಿ.



3	1 ಬಾರಿ 3 ಎಂದರೆ 3
3 + 3 = 6	2 ಬಾರಿ 3 ಎಂದರೆ 6
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____

ಸರಿಯಾದದ್ದನ್ನು (✓) ಗುರುತಿಸಿ.

5 ಬಾರಿ 3	—	5 + 5 + 5		—	3 + 3 + 3 + 3 + 3		
4 ಬಾರಿ 3	—	3 + 3 + 3 + 3		—	4 + 4 + 4		
7 ಬಾರಿ 2	—	7+7		—	2 + 2 + 2 + 2 + 2 + 2+ 2		
5 ಬಾರಿ 2	—	5 + 5		—	2+ 2 + 2 + 2 + 2		

ಪುನರಾವರ್ತಿತ ಸಂಕಲನದ ಒಟ್ಟು ಮೊತ್ತವನ್ನು ಕಂಡುಹಿಡಿಯಿರಿ.

2 + 2 + 2 + 2 + 2 = 10	3 + 3 + 3 + 3 + 3 + 3 + 3 + 3 + 3 = _____
3 + 3 + 3 + 3 + 3 + 3 + 3 = _____	2 + 2 + 2 + 2 + 2 + 2 + 2 + 2 = _____
2 + 2 + 2 + 2 + 2 + 2 + 2 = _____	3 + 3 + 3 + 3 + 3 + 3 + 3 + 3 = _____

ಅಭ್ಯಾಸ ಮಾಡೋಣ

ಚಿತ್ರಗಳನ್ನು ಗಮನಿಸಿ ಬಿಟ್ಟ ಸ್ಥಳ ಭರ್ತಿ ಮಾಡಿ.

	1 ಬಾರಿ 4 ಎಂದರೆ 4
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____

ಚಿತ್ರಗಳನ್ನು ಗಮನಿಸಿ ಬಿಟ್ಟ ಸ್ಥಳ ಭರ್ತಿ ಮಾಡಿ.

	1 ಬಾರಿ 5 ಎಂದರೆ 5
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____

ಅಭ್ಯಾಸ ಮಾಡೋಣ

ಕೆಳಗಿನವುಗಳನ್ನು ಹೊಂದಿಸಿ.



ಪುನರಾವರ್ತಿತ ಸಂಕಲನದ ಒಟ್ಟು ಮೊತ್ತವನ್ನು ಕಂಡುಹಿಡಿಯಿರಿ.

5 + 5 + 5 + 5 + 5 + 5	= 30	4 + 4 + 4 + 4 + 4 + 4 + 4	= _____
4 + 4 + 4 + 4 + 4	= _____	5 + 5 + 5 + 5 + 5 + 5 + 5 + 5 + 5	= _____
5+5+5+5+5+5+5+5	= _____	4 + 4 + 4 + 4 + 4 + 4 + 4 + 4	= _____

ಕೋಷ್ಟಕವನ್ನು ಪೂರ್ಣಗೊಳಿಸಿ.

10	1 ಬಾರಿ 10 ಎಂದರೆ 10
10 + 10 = 20	2 ಬಾರಿ 10 ಎಂದರೆ 20
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____
	____ ಬಾರಿ ____ ಎಂದರೆ ____

ಅನ್ವೇಷಿಸಿ ತಿಳಿಯೋಣ

ಕೆಳಗಿನವುಗಳಿಗೆ ಉತ್ತರಿಸಿ.

ಕವಿಯರಸನ್ 3 ಪ್ಯಾಕೆಟ್ ಚಾಕೊಲೇಟ್‌ಗಳನ್ನು ಖರೀದಿಸಿದನು. ಪ್ರತಿ ಪ್ಯಾಕೆಟ್‌ನಲ್ಲಿ 5 ಚಾಕೊಲೇಟ್‌ಗಳಿದ್ದವು. ಅವನು ಒಟ್ಟು ಎಷ್ಟು ಚಾಕೊಲೇಟ್‌ಗಳನ್ನು ಖರೀದಿಸಿದನು?



☐ + ☐ + ☐ = ☐

ಮಲರ್ವಿಳಿ ಮನೆಯಲ್ಲಿ 4 ಹೂವಿನ ಕುಂಡಗಳಿವೆ. ಪ್ರತಿ ಹೂವಿನ ಕುಂಡದಲ್ಲಿ 3 ಹೂವುಗಳು ಅರಳಿವೆ. ಕುಂಡಗಳಲ್ಲಿರುವ ಒಟ್ಟು ಹೂವುಗಳ ಸಂಖ್ಯೆ ಎಷ್ಟು?



☐ + ☐ + ☐ + ☐ = ☐

ಕಯಲ್ವಿಳಿ ತನ್ನ ತೋಟದಲ್ಲಿರುವ ಹೂವುಗಳನ್ನು ಮನೆಯಲ್ಲಿ ಎಣಿಸುತ್ತಿದ್ದಾಳೆ. ತಲಾ 5 ಹೂವುಗಳನ್ನು ಹೊಂದಿರುವ 4 ಸಾಲುಗಳಿವೆ. ಅವಳು ಅದನ್ನು ಪದೇ ಪದೇ ಸೇರಿಸುತ್ತಾ ಈ ಕೆಳಗಿನಂತೆ ಬರೆಯುತ್ತಾಳೆ.

4 + 4 + 4 + 4 + 4 = 20

ಕಯಲ್ವಿಳಿ ಎಣಿಸಿದ್ದು ಸರಿಯೋ? ತಪ್ಪೋ? ಕಾರಣ ನೀಡಿ.



ಯಾರು ಸರಿ? ಕಾರಣ ನೀಡಿ.



ನಿಮ್ಮ ನೆಚ್ಚಿನ ಹೂವುಗಳನ್ನು ಸಮಾನ ಸಂಖ್ಯೆಗಳ 3 ಗುಂಪುಗಳಲ್ಲಿ ಬಿಡಿಸಿ ಅದಕ್ಕೆ ಪುನರಾವರ್ತಿತ ಸೇರ್ಪಡೆ ಲೆಕ್ಕಗಳನ್ನು ರಚಿಸಿ.

☐ + ☐ + ☐ = ☐

ಕಲಿಕಾ ಪರಿಶೀಲನೆ

HT2RN

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಚಿತ್ರಗಳನ್ನು ಗಮನಿಸಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿ.



ಸಮಾನ ಗುಂಪುಗಳ ಸಂಖ್ಯೆ _____

ಪ್ರತಿ ಗುಂಪಿನಲ್ಲಿರುವ ಬಾತುಕೋಳಿಗಳ ಸಂಖ್ಯೆ _____

_____ ಬಾತುಕೋಳಿಗಳ _____ ಗುಂಪುಗಳು.

ಬಾತುಕೋಳಿಗಳ ಒಟ್ಟು ಸಂಖ್ಯೆ = _____

____ ಬಾರಿ ____ ಎಂದರೆ ____

2. ಚಿತ್ರಗಳನ್ನು ಗಮನಿಸಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿ.



____ ಬಾರಿ ____ ಎಂದರೆ ____

3. ಪುನರಾವರ್ತಿತ ಸಂಕಲನದ ಹೇಳಿಕೆಯ ಮೊತ್ತವನ್ನು ಕಂಡುಹಿಡಿಯಿರಿ.

5 + 5 + 5 + 5 + 5 + 5 + 5 + 5 =_____

4. ಬಿಟ್ಟ ಜಾಗವನ್ನು ಭರ್ತಿ ಮಾಡಿ.

7 ಬಾರಿ 2 ಎಂದರೆ ____

5. ಮುಗಿಲನ್ ಬಳಿ 3 ಮೀನು ತೊಟ್ಟಿಗಳಿವೆ. ಪ್ರತಿ ತೊಟ್ಟಿಯಲ್ಲಿ 10 ಮೀನುಗಳಿದ್ದರೆ, ತೊಟ್ಟಿಗಳಲ್ಲಿರುವ ಒಟ್ಟು ಮೀನುಗಳ ಸಂಖ್ಯೆ ಎಷ್ಟು?





ನಾನು ಕಲಿತದ್ದು

ಸಮಾನ ಗುಂಪುಗಳ ಮೂಲಕ ಪುನರಾವರ್ತಿತ ಸಂಕಲನವನ್ನು ತಿಳಿಯುತ್ತದೆ.	ಚಿತ್ರಗಳನ್ನು ಗಮನಿಸಿ ಕೋಷ್ಟಕವನ್ನು ಭರ್ತಿ ಮಾಡಿ.  2 + 2 + 2 + 2 + 2 = 10 5 ಬಾರಿ 2 ಎಂದರೆ 10		
ಸಂಖ್ಯಾ ರೇಖೆಯನ್ನು ಬಳಸಿಕೊಂಡು ಪುನರಾವರ್ತಿತ ಸಂಕಲನವನ್ನು ತಿಳಿದುಕೊಳ್ಳುತ್ತದೆ.	ಸಂಖ್ಯಾ ರೇಖೆಯ ಮೇಲೆ ರೇಖೆಯನ್ನು ಮುಂದಕ್ಕೆ ಎಳೆಯುವ ಮೂಲಕ ಕೋಷ್ಟಕವನ್ನು ಭರ್ತಿ ಮಾಡಿ. 		

5. ಮೇಲೆ... ಮೇಲೆ... ಕೆಳಗೆ... ಕೆಳಗೆ...

ಕಲಿಯೋಣ

HR4GG

ವರುಣ್ ಮತ್ತು ನವೀನ್ ಒಡಹುಟ್ಟಿದವರು. ಅವರು ಉದ್ಯಾನವನದಲ್ಲಿ ಸೀ–ಸಾ ಮೇಲೆ ಕುಳಿತು ಆಟವಾಡುತ್ತಿದ್ದರು.





ಅಷ್ಟರಲ್ಲಿ, ಅವರ ಅಕ್ಕ ಕಾವ್ಯ ಅಲ್ಲಿಗೆ ಬಂದಳು.









ಅವರು ಸೀ–ಸಾ ಮೇಲೆ ಕುಳಿತು ಸಂತೋಷದಿಂದ ಆಟವಾಡುವುದನ್ನು ಮುಂದುವರೆಸಿದರು.

ಶಿಕ್ಷಕರ ಟಿಪ್ಪಣಿ

'ಹೆಚ್ಚು ತೂಕ' ಇರುವ ಬದಿ ಕೆಳಗೆ ಹೋಗುತ್ತದೆ ಮತ್ತು 'ಕಡಿಮೆ ತೂಕ' ಇರುವ ಬದಿ ಮೇಲೆ ಹೋಗುತ್ತದೆ ಎಂದು ವಿವರಿಸಲು ಕಥೆಯನ್ನು ನಿರೂಪಿಸಿ. ನಂತರ ಪರಿಕಲ್ಪನೆಯನ್ನು ಬಲಪಡಿಸಲು ಮಕ್ಕಳನ್ನು ಶಾಲೆಯ ಸೀ–ಸಾ ದಲ್ಲಿ ಆಟವಾಡಲು ಬಿಡಿ.

ಮಾಡಿ ನೋಡೋಣ







ಸರಳವಾದ ತಕ್ಕಡಿಯನ್ನು ತಯಾರಿಸಿ. ಮೇಜಿನ ಮೇಲೆ ಕೆಲವು ವಸ್ತುಗಳನ್ನು ಇರಿಸಿ. ಇಬ್ಬರು ಮಕ್ಕಳನ್ನು ಕರೆದು ಒಂದು ಮಗು ಯಾವುದಾದರೂ ಎರಡು ವಸ್ತುಗಳನ್ನು ಆರಿಸಿ, ಅವುಗಳಲ್ಲಿ ಯಾವುದು 'ಭಾರವಾದದ್ದು' ಮತ್ತು ಯಾವುದು 'ಹಗುರವಾದದ್ದು' ಎಂದು ಹೇಳಲಿ. ಇನ್ನೊಂದು ಮಗು ವಸ್ತುಗಳನ್ನು ತಕ್ಕಡಿಯ ಮೇಲೆ ಇರಿಸಿ ಮೊದಲ ಮಗುವಿನ ಉತ್ತರವನ್ನು ಪರಿಶೀಲಿಸಲು ತಕ್ಕಡಿಯ ತಟ್ಟೆಗಳ ಸ್ಥಾನವನ್ನು ಗಮನಿಸಿ.

ಅಭ್ಯಾಸ ಮಾಡೋಣ

ಸರಳ ಸಮತೋಲನವನ್ನು ಗಮನಿಸಿ ಮತ್ತು ಭಾರವಾದ ವಸ್ತುವಿಗೆ (✓) ಗುರುತು ಹಾಕಿ.



ಸರಳ ಸಮತೋಲನವನ್ನು ಗಮನಿಸಿ ಮತ್ತು ಹಗುರವಾದ ವಸ್ತುವಿಗೆ (✓) ಗುರುತು ಹಾಕಿ.



ಅಭ್ಯಾಸ ಮಾಡೋಣ

ವಸ್ತುಗಳ ತೂಕವನ್ನು ಹೋಲಿಕೆ ಮಾಡಿ ಮತ್ತು ಅವುಗಳನ್ನು ಸರಿಯಾದ ತಟ್ಟೆಯೊಂದಿಗೆ ಹೊಂದಿಸಿ.



ವಸ್ತುಗಳನ್ನು ಅದರ ಮೇಲೆ ಇರಿಸಿದ ನಂತರ ಸರಿಯಾದ ಸ್ಥಾನಕ್ಕೆ (✓) ಗುರುತು ಹಾಕಿ.





ಅನ್ವೇಷಿಸಿ ತಿಳಿಯೋಣ

ತರಕಾರಿಗಳನ್ನು ತಕ್ಕಡಿಯ ಮೇಲೆ ಇರಿಸಿ. ತಟ್ಟೆ ಕೆಳಗೆ ಹೋದರೆ ↓ ಗುರುತು ಮಾಡಿ. ತಟ್ಟೆ ಮೇಲಕ್ಕೆ ಹೋದರೆ ↑ ಗುರುತು ಹಾಕಿ.



ಕಲ್ಲಂಗಡಿ ಅಥವಾ ದ್ರಾಕ್ಷಿ, ಗೊಂಚಲು ಎತ್ತಲು ಯಾವುದು ಕಷ್ಟ? ಏಕೆ?



ಭಾರವಾದ ವಸ್ತುವಿಗೆ **'H'** ಮತ್ತು ಹಗುರವಾದ ವಸ್ತುವಿಗೆ **'L'** ಬರೆಯಿರಿ.



ಚಿತ್ರವನ್ನು ಗಮನಿಸಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿ.



1 ಎಲೆಕೋಸಿನ ತೂಕ ಆಲೂಗಡ್ಡೆಯ _____ ತೂಕಕ್ಕೆ ಸಮಾನವಾಗಿರುತ್ತದೆ



1 ಬೇರಿಕಾಯಿಯ ತೂಕ_____ ನಿಂಬೆಹಣ್ಣಿನ ತೂಕಕ್ಕೆ ಸಮಾನವಾಗಿರುತ್ತದೆ.

ಕಲಿಕಾ ಪರಿಶೀಲನೆ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಸರಳ ಸಮತೋಲನವನ್ನು ಗಮನಿಸಿ ಮತ್ತು ಹಗುರವಾದ ವಸ್ತುವಿಗೆ (✓) ಗುರುತು ಹಾಕಿ.



2. ಪ್ರಾಣಿಗಳ ತೂಕವನ್ನು ಹೋಲಿಕೆ ಮಾಡಿ ಮತ್ತು ಅವುಗಳನ್ನು ಸರಿಯಾದ ತಟ್ಟೆಯೊಂದಿಗೆ ಹೊಂದಿಸಿ.



3. ಭಾರವಾದ ವಸ್ತುವಿಗೆ 'H' ಮತ್ತು ಹಗುರವಾದ ವಸ್ತುವಿಗೆ 'L' ಬರೆಯಿರಿ.



4. ಚಿತ್ರವನ್ನು ಗಮನಿಸಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿ.



1 ದಾಳಿಂಬೆಯ ತೂಕವು _____ ಕ್ಯಾಪ್ಸಿಕಂನ ತೂಕಕ್ಕೆ ಸಮಾನವಾಗಿರುತ್ತದೆ.

5. ತೂಕದ ತಕ್ಕಡಿಯನ್ನು ಸಮ ಸ್ಥಾನಕ್ಕೆ ತರಲು ತಕ್ಕಡಿಯ ಯಾವ ತಟ್ಟೆಯ ಮೇಲೆ ನೀವು ಹೆಚ್ಚು ಹಣ್ಣುಗಳನ್ನು ಇರಿಸುತ್ತೀರಿ? ಏಕೆ?



ನಾನು ಕಲಿತದ್ದು

ಸರಳ ಸಮತೋಲನವನ್ನು ಬಳಸಿಕೊಂಡು ಭಾರವಾದ ಮತ್ತು ಹಗುರವಾದ ವಸ್ತುಗಳನ್ನು ಹೋಲಿಸಲು.			

6. ಉಳಿದ ಬಣ್ಣದ ಪೆನ್ಸಿಲ್‌ಗಳು

ಕಲಿಯೋಣ

ಶರಣ್ ಚಿತ್ರಕಲಾ ಸ್ಪರ್ಧೆಗೆ ಎಷ್ಟು ಬಣ್ಣದ ಪೆನ್ಸಿಲ್‌ಗಳನ್ನು ತೆಗೆದುಕೊಂಡಿದ್ದಾನೆಂದು ಕಂಡುಹಿಡಿಯಲು ವೆನ್ಮತಿಗೆ ಸಹಾಯ ಮಾಡೋಣವೇ?



ಶಿಕ್ಷಕರ ಟಿಪ್ಪಣಿ

ಮೇಲಿನ ಸನ್ನಿವೇಶವನ್ನು ಮಕ್ಕಳೊಂದಿಗೆ ಚರ್ಚಿಸಿ. ಉತ್ತರವನ್ನು ಕಂಡುಹಿಡಿಯಲು ಅವರು 1 ನೇ ತರಗತಿಯಲ್ಲಿ ಕಲಿತ 20 ರೊಳಗಿನ ಒಂದು ಅಂಕಿಯ ಸಂಖ್ಯೆಗಳ ವ್ಯವಕಲನವನ್ನು ನೆನಪಿಸಿಕೊಳ್ಳಲು ಪ್ರೋತ್ಸಾಹಿಸಿ.

ಅಭ್ಯಾಸ ಮಾಡೋಣ

ಚಿತ್ರಗಳನ್ನು ಗಮನಿಸಿ ವ್ಯವಕಲನ ಸಂಗತಿಯನ್ನು ಪೂರ್ಣಗೊಳಿಸಿ.



ಹಿಂದಕ್ಕೆ ಎಣಿಸಿ ಮತ್ತು ಕಳೆಯಿರಿ.

14	12	16	15	12	13
- 8	- 7	- 9	- 6	- 9	- 8

ಕಲಿಯೋಣ

53–16 ಕಳೆಯಿರಿ



ಹತ್ತುಗಳು	ಒಂದುಗಳು
5	3
− 1	6

ಹಂತ - 1

ಒಂದುಗಳನ್ನು ಕಳೆಯಿರಿ

